ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಫೆಬ್ರವರಿ 2017 ಮಾಸ ಪತ್ರಿಕೆ

ಸಂಪುಟ : 39
ಸಂಚಿಕೆ : 5
ಪುಟ : 12
ಬೆಲೆ : ₹ 10/-



ಶ್ರೀ ಜಗ್ಗಿ ವಾಸುದೇವ
ಪದ್ಮವಿಭೂಷಣ ಪುರಸ್ಕೃತರು

ಶ್ರೀ ಚ. ಮು. ಕೃಷ್ಣಶಾಸ್ತ್ರಿ
ಪದ್ಮಶ್ರೀ ಪುರಸ್ಕೃತರು

ಪ್ರೊ. ಜಿ. ವೆಂಕಟಸುಬ್ಬಯ್ಯ
ಪದ್ಮಶ್ರೀ ಪುರಸ್ಕೃತರು

ಶ್ರೀ ಉಡುಪಿ ರಾಮಚಂದ್ರ ರಾವ್
ಪದ್ಮವಿಭೂಷಣ ಪುರಸ್ಕೃತರು

ಬಡವರ ಮಕ್ಕಳ ಮೇಲೆ ಬರಗೂರರ ವೈಚಾರಿಕ ದೌರ್ಜನ್ಯ 3

ಮುಂದಿನ ವರ್ಷದಿಂದ ಕನಿಷ್ಠ ಕಲಿಕಾಮಟ್ಟ ಕಡ್ಡಾಯ 8

A Journal of Karnataka State Secondary Teachers' Association

# ಸಂಪಾದಕೀಯ

ಈ ವರ್ಷದ ಗಣರಾಜ್ಯೋತ್ಸವದ ಸಲುವಾಗಿ ರಾಷ್ಟ್ರಪತಿಗಳು ಕರ್ನಾಟಕದ ಇಬ್ಬರು ಸಾಧಕರಿಗೆ 'ಪದ್ಮವಿಭೂಷಣ' ಹಾಗೂ ಏಳು ಜನ ಸಾಧಕರಿಗೆ 'ಪದ್ಮಶ್ರೀ' ಪ್ರಶಸ್ತಿಯನ್ನು ಘೋಷಿಸಿದ್ದು ಕನ್ನಡಿಗರೆಲ್ಲರಿಗೂ ಹೆಮ್ಮೆಯೇ ಸರಿ. ಪದ್ಮವಿಭೂಷಣ ಪುರಸ್ಕೃತ ಪ್ರೊ ॥ ಯು. ಆರ್. ರಾವ್., ಹಾಗೂ ಶ್ರೀಜಗ್ಗಿ ವಾಸುದೇವ್‌ರವರಿಗೆ ಹಾಗೂ ಪದ್ಮಶ್ರೀ ಪುರಸ್ಕೃತರಾದ ಪ್ರೊ ॥ ಜಿ.ವೆಂಕಟಸುಬ್ಬಯ್ಯ, ಶ್ರೀಯುತರಾದ ಚ.ಮೂ. ಕೃಷ್ಣಶಾಸ್ತ್ರಿ, ಸುಕ್ರಿ ಬೊಮ್ಮಗೌಡ, ಭಾರತಿವಿಷ್ಣುವರ್ಧನ್, ಗಿರೀಶ್ ಭಾರದ್ವಾಜ್, ವಿಕಾಸ್ ಗೌಡ ಹಾಗೂ ಶೇಖರ್ ನಾಯ್ಕ್ – ಇವರೆಲ್ಲರನ್ನೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಪದ್ಮಶ್ರೀ ಪುರಸ್ಕೃತರಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯ ಹಾಗೂ ಚ.ಮು. ಕೃಷ್ಣಶಾಸ್ತ್ರಿಯವರು ಶಿಕ್ಷಣತಜ್ಞರು ಎಂಬುದು ಶಿಕ್ಷಕರಾದ ನಮಗೆಲ್ಲ ಹೆಚ್ಚಿನ ಹೆಮ್ಮೆ, ಅಭಿಮಾನ, ಸಂತೋಷದ ಸಂಗತಿ. ನಿಘಂಟು ತಜ್ಞರಾದ ಪ್ರೊ॥ ಜಿ.ವಿ. ಯವರು ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಹಾಗೂ ಬೆಂಗಳೂರಿನ ಆರ್.ವಿ. ಶಿಕ್ಷಕರ ಕಾಲೇಜಿನಲ್ಲಿ ಬಿ. ಇಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಬೆಳಕನ್ನು ನೀಡಿದ್ದಾರೆ. 104ರ ಈ ಇಳವಯಸ್ಸಿನಲ್ಲೂ ಜಿ.ವಿ.ಯವರು ಪ್ರತಿದಿನ ಪುಸ್ತಕವನ್ನು ಓದದೆ ವಿರಮಿಸುವುದಿಲ್ಲ. ಸಾಹಿತ್ಯ ಹಾಗೂ ನಿಘಂಟು ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ಅವರಿಗೆ ತಡವಾಗಿಯಾದರೂ 'ಪದ್ಮಶ್ರೀ' ಪುರಸ್ಕಾರ ಸಂದಿರುವುದು ತುಂಬಾ ಸಂತಸದ ಸಂಗತಿ. ಪದ್ಮಶ್ರೀ ಪುರಸ್ಕೃತ ಮತ್ತೊಬ್ಬ ಶಿಕ್ಷಣತಜ್ಞರು ಶ್ರೀ ಚ.ಮು. ಕೃಷ್ಣಶಾಸ್ತ್ರಿಗಳು. ಸಂಸ್ಕೃತ ಭಾಷೆಯಲ್ಲಿ ಶ್ರೀಯುತರ ಸಾಧನೆ ಅಪಾರ. ಸಂಸ್ಕೃತವನ್ನು ಜನಮನದ ಭಾಷೆಯಾಗಿಸಲು ಶ್ರಮಿಸಿದವರು, ಶ್ರಮಿಸುತ್ತಿರುವವರು. 1981 ರಿಂದಲೇ ಸಂಸ್ಕೃತ ಸಂಭಾಷಣಾ ಶಿಬಿರಗಳನ್ನು ಆಯೋಜಿಸುವುದರ ಮೂಲಕ 90ಲಕ್ಷ ಜನರಿಗೆ ಸಂಸ್ಕೃತ ಮಾತನಾಡಲು ಪ್ರೇರಣೆ ನೀಡಿದ್ದಾರೆ. 'ಸಂಸ್ಕಾರಭಾರತಿ'ಯ ಮೂಲಕ ಸಂಸ್ಕೃತ ಭಾಷೆಯ ಪ್ರಗತಿಗಾಗಿ ಶ್ರಮಿಸುತ್ತಿರುವವರು. ಚ.ಮು. ಕೃಷ್ಣಶಾಸ್ತ್ರಿಗಳು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಸಂಸ್ಕೃತ ವಿಭಾಗದಲ್ಲಿ ಅನೇಕ ವರ್ಷ ಕೆಲಸ ನಿರ್ವಹಿಸಿದವರು. ಇದಲ್ಲದೆ ಅನೇಕ ಸಂಸ್ಥೆಗಳಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದಂತೆ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದವರು. 60 ವರ್ಷದ ಚ.ಮು. ಕೃಷ್ಣಶಾಸ್ತ್ರಿಗಳ ಸಾಧನೆಯನ್ನು ಭಾರತ ಸರ್ಕಾರ ಗುರುತಿಸಿರುವುದು ಅಭಿನಂದನೀಯ. ಇಬ್ಬರು ಶಿಕ್ಷಣತಜ್ಞರು ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವುದು ಶಿಕ್ಷಕರ ಸಂತೋಷವನ್ನು ಇಮ್ಮಡಿಸಿದೆ.

ಕರ್ನಾಟಕ ಸರ್ಕಾರ ಒಂದರಿಂದ ಹತ್ತನೆ ತರಗತಿಯ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ ಈ ವರ್ಷವೇ ಜಾರಿಗೆ ತರಲು ಹಠ ತೊಟ್ಟಿದೆ. ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ತಿಂಗಳ ಹಿಂದೆ ಸಮಿತಿ ರಚಿಸಲಾಯಿತು. ಅಂದಿನಿಂದ ಆಮೆಯ ಗತಿಯಲ್ಲಿದ್ದ ಸಮಿತಿ ಈಗ ಒಂದೂವರೆ ತಿಂಗಳಿಂದ ವೇಗವನ್ನು ಪಡೆದುಕೊಂಡಂತೆ ಆತುರಾತುರವಾಗಿ 2017–18 ರಲ್ಲೇ ಎಲ್ಲಾ ತರಗತಿಗಳಿಗೂ ಒಮ್ಮೆಲೇ ಪರಿಷ್ಕೃತ ಪಠ್ಯಪುಸ್ತಕವನ್ನು ಜಾರಿಗೆ ತರಲು ಉತ್ಸುಕತೆಯಿಂದ ಹೊರಟಿದೆ. ಶಿಕ್ಷಣ ಇಲಾಖೆ ಈ ಬಗ್ಗೆ ಆಸಕ್ತವಾಗಿಲ್ಲದಿರುವುದು ಗಮನಾರ್ಹ. ಬದಲಾಗುವ ಪಠ್ಯಪುಸ್ತಕಗಳು ಬಹುಶಃ ಒಂದು ವರ್ಷ ಮಾತ್ರ ಅಸ್ತಿತ್ವದಲ್ಲಿರುತ್ತದೆ. ಸದ್ಯದಲ್ಲಿಯೇ ಕೇಂದ್ರ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಕಟಿಸಲಿದ್ದು ಎಲ್ಲಾ ರಾಜ್ಯಗಳೂ ಆ ನೀತಿಗೆ ಅನುಗುಣವಾಗಿ ಪಠ್ಯಪುಸ್ತಕಗಳನ್ನು ರಚಿಸಬೇಕಾಗುತ್ತದೆ. ಮೇಲಾಗಿ ಪಠ್ಯಪುಸ್ತಕಗಳು ಪರಿಷ್ಕೃತಗೊಂಡಾಗ ಸಂಬಂಧಿಸಿದವರ, ವಿಶೇಷವಾಗಿ ಶಿಕ್ಷಕರ ಪರಿಶೀಲನೆಗೆ ಒಳಪಡಬೇಕು. ಆದರೆ ಆ ರೀತಿಯ ಪರಿಶೀಲನೆಗೆ ಅವಕಾಶ ನೀಡಿದಂತಿಲ್ಲ. ಸ್ವತಃ ಶಿಕ್ಷಕರಾದ ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರು ಶಿಕ್ಷಕರ ಅವಗಾಹನೆಗೂ ಅವಕಾಶ ನೀಡದೆ ಆತುರಾತುರವಾಗಿ ಈ ವರ್ಷವೇ ಜಾರಿಗೆ ತರಲು ಏಕೆ ತವಕಿಸುತ್ತಿದ್ದಾರೆ. ಅದರಿಂದ ಸಾಧಿಸುವುದಾದರೂ ಏನನ್ನು? ಈಗಲಾದರೂ ಸರ್ಕಾರ, ಸಮಿತಿ ಶಿಕ್ಷಣ ತಜ್ಞರ, ಶಿಕ್ಷಕರ, ಶಿಕ್ಷಕ ಪ್ರತಿನಿಧಿಗಳ ಸಲಹೆಗೆ ಸ್ಪಂದಿಸಿ ತನ್ನ ತೀರ್ಮಾನವನ್ನು ಬದಲಿಸುವುದೆಂದು ಆಶಿಸೋಣ.

ರಾಷ್ಟ್ರಕವಿ ಡಾ॥. ಜಿ ಎಸ್. ಶಿವರುದ್ರಪ್ಪ, ನವ್ಯಕಾವ್ಯದ ನೇತಾರರಾದ ಪ್ರೊ॥ ಎಂ. ಗೋಪಾಲಕೃಷ್ಣ ಅಡಿಗರು, ಭಾಷಾಶಾಸ್ತ್ರಜ್ಞರಾದ ಹಾ.ಮಾ. ನಾಯಕ್, ಖ್ಯಾತ ವಿದ್ವಾಂಸರಾದ ಡಾ॥. ಆ. ನೇ. ಉಪಾಧ್ಯ, ವಚನಭಾರತದಂತಹ ಶ್ರೇಷ್ಠ ಕೃತಿಗಳನ್ನು ರಚಿಸಿದ ಎ. ಆರ್. ಕೃಷ್ಣಶಾಸ್ತ್ರಿಗಳು, ಜಾನಪದ ತಜ್ಞರಾದ ಸಿಂಪಿ ಲಿಂಗಣ್ಣ, ಡಾ॥ ಎಚ್. ಎಲ್. ನಾಗೇಗೌಡರು, ಮಕ್ಕಳ ಸಾಹಿತ್ಯಕ್ಕೆ ಹೆಸರಾದ ಪಂಜೆ ಮಂಗೇಶರಾಯರು, ಡಾ॥. ಬಿಜಿಎಲ್. ಸ್ವಾಮಿ –ಹೀಗೆ ಸಾಹಿತ್ಯ ಲೋಕದಲ್ಲಿ ಈ ಎಲ್ಲಾ ಮಹನೀಯರ ಸಾಧನೆ ಚಿರಸ್ಮರಣೀಯ. ಈ ಎಲ್ಲಾ ಮಹನೀಯರು ಜನಿಸಿದ್ದು ಫೆಬ್ರವರಿ ತಿಂಗಳಿನಲ್ಲಿ. ಅಂತೆಯೇ ಖ್ಯಾತ ಸಾಹಿತಿಗಳಾದ ಆಲೂರು ವೆಂಕಟರಾಯರು, ಎ.ಆರ್. ಕೃಷ್ಣಶಾಸ್ತ್ರಿಗಳು, ಸಂಸ, ನಾ. ಕಸ್ತೂರಿ, ರಂಶ್ರೀ. ಮುಗಳಿ, ಟಿ.ಎಸ್. ವೆಂಕಣ್ಣಯ್ಯ, ಎಸ್.ವಿ. ರಂಗಣ್ಣನವರು ಮರಣಿಸಿದ್ದು ಫೆಬ್ರವರಿಯಲ್ಲಿ. ಈ ಎಲ್ಲಾ ಮಹನೀಯರ ಸಾಹಿತ್ಯಕ ಸಾಧನೆಗಳನ್ನು ಒಮ್ಮೆ ನೆನಪಿಸಿಕೊಳ್ಳೋಣ.

ಸಂಪಾದಕರು

## ಸೂಕ್ತಿ



ಲೋಕಯಾತ್ರಾಭಯಂ  
ಲಜ್ಜಾದಾಕ್ಷಿಣ್ಯಂ ತ್ಯಾಗಶೀಲತಾ ।  
ಪಂಚಯತ್ರನವಿಂದ್ಯತೇ  
ನ ಕುರ್ಯಾತ್ ತತ್ರ ಸಂಗತಿಮ್ ॥

ವ್ಯವಹಾರ ಜ್ಞಾನ, ಭಯ, ನಾಚಿಕೆ, ದಾಕ್ಷಿಣ್ಯದ ಸ್ವಭಾವ ಹಾಗೂ ತ್ಯಾಗಬುದ್ಧಿ _ ಈ ಐದು ಗುಣಗಳು ಯಾರಲ್ಲಿ ಇರುವುದಿಲ್ಲವೋ ಅಂತಹವರ ಸ್ನೇಹವನ್ನು ಮಾಡಬಾರದು. ಆಯಾ ಸಂದರ್ಭ, ಪರಿಸ್ಥಿತಿಗಳಿಗೆ ಅಗತ್ಯವಾಗಿ ಬೇಕಾದ ಈ ಐದು ಗುಣಗಳನ್ನು ಪ್ರತಿಯೊಬ್ಬರೂ ಹೊಂದಿರಬೇಕು, ಮತ್ತು ಅಂಥ ಗುಣಗಳಿರುವವರ ಗೆಳೆತನವನ್ನೇ ಮಾಡಬೇಕು. ಇದರಿಂದ ಒಳ್ಳೆಯದೇ ಆಗುತ್ತದೆ.

- ಚಾಣಕ್ಯನೀತಿ

## ಪರಿವಿಡಿ


- ಬಡವರ ಮಕ್ಕಳ ಮೇಲೆ ಬರಗೂರರ ವೈಚಾರಿಕ ದೌರ್ಜನ್ಯ 3
- ಶತಾಯುಷಿ ಪ್ರೊ.ಜಿ.ವಿ ಈಗ 'ಪದ್ಮಶ್ರೀ' 4
- ಪದ್ಮಶ್ರೀ ಚ. ಮು. ಕೃಷ್ಣಶಾಸ್ತ್ರಿ: ಸಂಸ್ಕೃತ ಭಾರತಿಗೆ ಗರಿ 5
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಒಂದು ಅವಲೋಕನ 6
- ಸುತ್ತೋಲೆ 7
- ಮುಂದಿನ ವರ್ಷದಿಂದ ಕನಿಷ್ಠ ಕಲಿಕಾಮಟ್ಟ ಕಡ್ಡಾಯ 8
- ಪರಿಷ್ಕೃತ ಪಠ್ಯಪುಸ್ತಕ 10
- ಸಂಕಲ್ಪ ದಿನ– ವರದಿ 11
- ಚಿತ್ರ ಸುದ್ದಿ 12

# ಬಡವರ ಮಕ್ಕಳ ಮೇಲೆ ಬರಗೂರರ ವೈಚಾರಿಕ ದೌರ್ಜನ್ಯ

ಮುಖ್ಯಮಂತ್ರಿಗಳ ಆಸ್ಥಾನ ಸಾಹಿತಿ ಬರಗೂರು ರಾಮಚಂದ್ರಪ್ಪನವರ ನೇತೃತ್ವದ ಪಠ್ಯಪುಸ್ತಕ ಪುನರ್ ರಚನಾ ಸಮಿತಿ ಬಡವರ ಮಕ್ಕಳ ಭವಿಷ್ಯಕ್ಕೆ ಕೊಳ್ಳಿಯಿಡಲು ಹೊರಟು ನಿಂತಿದೆ. ಹಟಮಾರಿತನ ಧೋರಣೆಯ ಸಿಎಂ ಸಿದ್ದರಾಮಯ್ಯ ನವರು ಬರಗೂರರನ್ನು ತಡೆಯುವುದು ಬಿಟ್ಟು ಬೆನ್ನಿಗೆ ನಿಂತಿದ್ದಾರೆ. ಅಲ್ಲಿಗೆ ಸಿದ್ಧರಾಮಯ್ಯನವರ ತುಘಲಕ್ ದರ್ಬಾರ್ ಪಟ್ಟಿಗೆ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡವಿದ ಕೀರ್ತಿಯೂ ಸೇರಿಕೊಳ್ಳಲಿದೆ.

ಸೋ ಕಾಲ್ಡ್ ಸಮಾಜವಾದಿ ಸಿದ್ಧರಾಮಯ್ಯನವರ ಸರಕಾರ ಅಧಿಕಾರಕ್ಕೆ ಬಂದ ತಕ್ಷಣ, ಬಿಜೆಪಿಯ ಕಾಲದಲ್ಲಿ ಪಠ್ಯಪುಸ್ತಕಗಳ ಕೇಸರೀಕರಣವಾಗಿದೆ ಎಂಬ ಬುದ್ಧಿಜೀವಿಗಳ ಹುಯಿಲನ್ನು ಬೆಂಬಲಿಸಿ, ತಮ್ಮ ಆಸ್ಥಾನ ಸಾಹಿತಿಗಳಲ್ಲೊಬ್ಬರಾದ ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು 2014ರಲ್ಲಿ ರಚಿಸಿದ್ದರು. ಈ ಸಮಿತಿಯ ಕೆಲಸ ಮುಗಿಯಬೇಕಾದ ಸಮಯಕ್ಕೆ ಮುಗಿಯದ್ದರಿಂದ ಅವಧಿಯ ವಿಸ್ತರಣೆಯನ್ನೂ ಮಾಡಲಾಯಿತು. ಸಮಿತಿಯೊಂದರ ಅವಧಿಯು ವಿಸ್ತರಣೆಯಾಗುವಾಗ ಅಲ್ಲಿಯವರೆಗೂ ಆಗಿರುವ ಕಾರ್ಯಗಳ ವರದಿ ನೀಡುವುದು ವಾಡಿಕೆ. ಆದರೆ, ಮುಖ್ಯಮಂತ್ರಿಗಳ ಆಸ್ಥಾನ ಸಾಹಿತಿಗಳ ನೇತೃತ್ವದ ಈ ಸಮಿತಿಯನ್ನು ಹಾಗೆಲ್ಲ ಪ್ರಶ್ನಿಸಲಾದೀತೆ? ಈ ಸಮಿತಿ ರಚನೆಯಾದ ನಂತರ, ಹಿಂದಿನ ಪಠ್ಯಗಳಲ್ಲಿನ ಯಾವೆಲ್ಲ ಲೋಪದೋಷಗಳನ್ನು ಪತ್ತೆ ಮಾಡಲಾಗಿದೆ, ಏನನ್ನು ಪುನರ್ ರಚನೆ ಮಾಡುತ್ತಿದ್ದಾರೆ ಎಂಬ ಬಗ್ಗೆ ಯಾವುದೇ ಮಾಹಿತಿಯನ್ನು ಕೊಡದೆ ಎಲ್ಲವನ್ನೂ ನಿಗೂಢವಾಗಿಡಲಾಗುತ್ತಿದೆ.

ಈ ಪರಿ ನಿಗೂಢತೆಯನಿಟ್ಟುಕೊಂಡು ಬರಗೂರು ರಾಮಚಂದ್ರಪ್ಪನವರೇನು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಸರ್ಜಿಕಲ್ ಸ್ಟ್ರೈಕ್ ಮಾಡಲು ಹೊರಟಿದ್ದಾರೆಯೇ? ಎಲ್ಲಾ ಪಠ್ಯ ಪುಸ್ತಕಗಳ ಪರಿಷ್ಕರಣೆಯಾದರೂ ಆಗಿದೆಯೇ ಎಂದರೆ ಅದೂ ಇಲ್ಲ. ಬಹುಶಃ ಎಲ್ಲಾ ಪ್ರಿಂಟ್ ಆದ ನಂತರವೇ ಬರಗೂರರ ನಿಗೂಢ ಪ್ರಪಂಚದಿಂದ ಈ ಪುಸ್ತಕ ಹೊರಬರುತ್ತದೆ ಎನಿಸುತ್ತದೆ. ಇಂತಹ ನಿಗೂಢತೆಯನ್ನಿಟ್ಟುಕೊಂಡೇನೂ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸಲು ಹೊರಟಿದ್ದಾರೆಯೇ ಎಂದು ನಿರೀಕ್ಷೆಯಿಟ್ಟುಕೊಂಡರೆ ಆಘಾತವಾಗುತ್ತದೆ.

ಬರಗೂರರ ಸಮಿತಿ ಪಠ್ಯಪುಸ್ತಕ ಪುನರ್ ರಚನೆಗೆ ಮಾನದಂಡವಾಗಿಟ್ಟುಕೊಂಡಿರುವುದು, NCF 2005(National Curriculum Framework ಮತ್ತು KCF 2007(Karnataka Curriculum Framework) ಮಾರ್ಗಸೂಚಿಯನ್ನು. ಲೋಕವೆಲ್ಲ ಮುಂದೆ ಚಲಿಸುವಾಗ ಬಂಡಾಯ ಸಾಹಿತಿಗಳ ಅಧ್ಯಕ್ಷತೆಯ ಸಮಿತಿಯನ್ನು ನಂಬಿಕೊಂಡು ಸಿಎಂ ಸಿದ್ಧರಾಮಯ್ಯನವರ ಸರಕಾರ ಬಡವರ ಮಕ್ಕಳ ಭವಿಷ್ಯದ ಮೇಲೆ ಬಂಡೆಗಲ್ಲನ್ನೆಳೆಯಲು ಹೊರಟುನಿಂತಿದೆ. ಮೋದಿಯವರ ಸರಕಾರ ಹೊಸ ಶಿಕ್ಷಣ ನೀತಿ (NCF 2017) ಯನ್ನು ತರುವುದಾಗಿ ಹೇಳಿತ್ತು. ಆ ಹೊಸ ಶಿಕ್ಷಣ ನೀತಿ ಇದೇ ವರ್ಷ ಜಾರಿಗೆ ಬರುವ ನಿರೀಕ್ಷೆಯಿದೆ. ಕೇಂದ್ರದ ನೀತಿ ಬಂದ ನಂತರ ರಾಜ್ಯಗಳೂ ಅದೇ ಹಾದಿಯನ್ನು ಹಿಡಿಯಬೇಕಾಗುತ್ತದೆ. ದೇಶದ ಉಳಿದ ರಾಜ್ಯಗಳೂ ಅದೇ ಹಾದಿಯನ್ನು ಹಿಡಿಯಬೇಕಾಗುತ್ತದೆ. ದೇಶದ ಉಳಿದ ರಾಜ್ಯಗಳ ಮಕ್ಕಳು 2017 ರ ಶಿಕ್ಷಣ ನೀತಿಯ ಲಾಭ ಪಡೆದರೆ, ನಮ್ಮ ರಾಜ್ಯದ ಮಕ್ಕಳು ಮಾತ್ರ ಬರಗೂರರ ಭಂಡತನ, ಸಿದ್ಧರಾಮಯ್ಯನವರ ಹಠಮಾರಿತನಗಳಿಗೆ ಬಲಿಯಾಗಿ 2007ರಲ್ಲೇ ಉಳಿಯಬೇಕೇನು? Ideological War ನಡೆಸಲು ಬರಗೂರರಿಗೆ, ಸಿಎಂ ಸಿದ್ಧರಾಮಯ್ಯನವರಿಗೆ ಬೇರೆ ಅಖಾಡವೇ ಸಿಗುತ್ತಿಲ್ಲವೇ?

ಬೆಳಗಾವಿ ಅಧಿವೇಶನದಲ್ಲಿ ಖುದ್ದು ಶಿಕ್ಷಣ ಸಚಿವರೇ, ಪಠ್ಯಪುಸ್ತಕ ಪುನರ್ ರಚನಾ ಸಮಿತಿ ಸೂಚಿಸುವ ಬದಲಾವಣೆ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಸಾಧ್ಯವಿಲ್ಲವೆಂದು ಮತ್ತು ಕೇಂದ್ರದ ಹೊಸ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳಲಾಗುವುದು ಎಂದು ಹೇಳಿದ್ದರಾದರೂ, ಮುಖ್ಯಮಂತ್ರಿಗಳ ಜೊತೆ ಆಪ್ತವಾಗಿರುವ ಬಂಡಾಯ ಸಾಹಿತಿಗಳು ಶಿಕ್ಷಣ ಸಚಿವರು, ಇಲಾಖೆಯ ಮೇಲೆ ಬಂಡೆಯನ್ನಿಟ್ಟು ಮುಂದಿನ ವರ್ಷವೇ ಬದಲಾವಣೆ ಯಾಗಬೇಕೆಂದು ಹಠಕ್ಕೆ ಬಿದ್ದಿದ್ದಾರೆ. ಚುನಾವಣಾ ಸಮಯದಲ್ಲಿ ಮತ್ತು ನಂತರ ಮುಖ್ಯಮಂತ್ರಿ ಹುದ್ದೆ ಪಡೆಯುವಾಗ ತಮ್ಮ ಬೆನ್ನಿಗೆ ನಿಂತ ಬುದ್ಧಜೀವಿಗಳ ಋಣಸಂದಾಯ ಮಾಡಲು ಸಿಎಂ ಸಿದ್ಧರಾಮಯ್ಯನವರು ವಿದ್ಯಾರ್ಥಿಗಳ ಭವಿಷ್ಯಕ್ಕೆ ಕೊಡಲಿಪೆಟ್ಟು ನೀಡಲು ಹೊರಟು ನಿಂತಿದ್ದಾರೆಯೇ? ಕಾಂಗ್ರೆಸ್ ಪಕ್ಷ ಮತ್ತು ಸರಕಾರದೊಳಗೆ ಸಿದ್ಧರಾಮಯ್ಯನವರ ಈ ಧೋರಣೆಗೆ ಅಪಸ್ವರವಿರುವುದೇನು ಗುಟ್ಟಾಗಿ ಉಳಿದಿಲ್ಲ. ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಮರು ಸಂಯೋಜನೆಯಾಗುತ್ತಿರುವ ಹಿನ್ನೆಲೆಯಲ್ಲಿ 9 ಹಾಗೂ 10 ನೇ ತರಗತಿಗೆ ಸಿಬಿಎಸ್ಸಿ ಪಠ್ಯ ಮುದ್ರಿಸಬೇಕು. ಹಾಗೆಯೇ ಉಳಿದ ತರಗತಿಗಳಿಗೆ 2018–19ನೇ ಸಾಲಿನಿಂದ ಪರಿಷ್ಕೃತ ಪಠ್ಯ ಮುದ್ರಿಸಬೇಕು ಎಂಬ ಆಲೋಚನೆ ಯಲ್ಲಿ ಶಿಕ್ಷಣ ಸಚಿವ ತನ್ವೀರ್ ಸೇಠ್ ಹಾಗೂ ಇಲಾಖೆ ಅಧಿಕಾರಿಗಳು ಇದ್ದರೆ, ಸಿಎಂ ಕಚೇರಿ ಹಾಗೂ ಬಂಡಾಯ ಸಾಹಿತಿಗಳ ಸಮಿತಿ ಪ್ರತಿಷ್ಠೆಯ ಸೊಕ್ಕನ್ನು ನೆತ್ತಿಗೇರಿಸಿಕೊಂಡಿದೆ.

ಬರಗೂರು ರಾಮಚಂದ್ರಪ್ಪನವರು, ಸಿಎಂ ಸಿದ್ಧರಾಮ್ಯನವರು ತಮ್ಮ ಈ ನಡೆಯನ್ನು ಸಮರ್ಥಿಸಿಕೊಳ್ಳಲು, ಬಿಜೆಪಿ ಸರಕಾರದ ಅವಧಿಯಲ್ಲಿ ಪಠ್ಯ ಪುಸ್ತಕದ ಕೇಸರೀಕರಣವಾಗಿದೆ ಎಂಬ ಬೊಬ್ಬೆಹೊಡೆಯುವ ಎಲ್ಲಾ ಸಾಧ್ಯತೆಗಳಿರುವುದರಿಂದ ಒಂದು ಮಾತನ್ನು ಅವಶ್ಯವಾಗಿ ದಾಖಲಿಸಬೇಕು. ಬಿಜೆಪಿ ಸರಕಾರವನ್ನು

ಪುಟ 9 ಕ್ಕೆ ➤

# ಶತಾಯುಷಿ ಪ್ರೊ. ಜಿ. ವಿ. ಈಗ 'ಪದ್ಮಶ್ರೀ'

ಮುಖದಲ್ಲಿ ಎದ್ದುಕಾಣುವ, ಮಾತಿನಲ್ಲಿ ಹೊರಹೊಮ್ಮುವ ಆತ್ಮವಿಶ್ವಾಸ, ಹಸನ್ಮುಖದಲ್ಲಿ ನಾಡು–ನುಡಿಗೆ ಸೇವೆ ಸಲ್ಲಿಸುತ್ತಿರುವ ತೃಪ್ತಿ, ಧನ್ಯತೆ, ಎಲ್ಲಕ್ಕಿಂತ ಹೆಚ್ಚಾಗಿ ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಸುಸಂಸ್ಕೃತ ವ್ಯಕ್ತಿತ್ವವೆಂದರೇನೆಂಬ ಪ್ರಶ್ನೆಗೆ ಉತ್ತರ ಪ್ರೊ॥ ಜಿ.ವಿ. ಅಕ್ಷರ ಜೀವಿ, ಸಾಹಿತ್ಯಜೀವಿ, ನಡೆದಾಡುವ ನಿಘಂಟು, ಪದಗುರು, ಶಬ್ದಸಾಗರ, ಭಾಷಾಶಾಸ್ತ್ರಜ್ಞ ಇತ್ಯಾದಿ ಇತ್ಯಾದಿ ಎಲ್ಲ ಹೆಸರುಗಳೊಂದಿಗೆ ಕನ್ನಡ ನಾಡಿನಾದ್ಯಂತ ಸಾರಸ್ವತ ಲೋಕದಲ್ಲಿ ಚಿರಪರಿಚಿತರಾಗಿರುವ ಗಂಜಾಂ ವೆಂಕಟಸುಬ್ಬಯ್ಯ ನವರು ಶತಾಯುಷಿಯಾಗಿ ವಿದ್ಯೆ ಮತ್ತು ವಿನಯದ ಸಾಕಾರಮೂರ್ತಿಯೆನಿಸಿದವರು. ಈ ಹಿರಿಯ ಚೇತನಕ್ಕೆ ಇದೀಗ 'ಪದ್ಮಶ್ರೀ' ಪ್ರಶಸ್ತಿಯ ಗೌರವಾರ್ಪಣೆ ಸಂದಿದೆ.

ತಮ್ಮ ಸುದೀರ್ಘ ಬದುಕಿನಲ್ಲಿ ಇವರು ನಿರ್ವಹಿಸಿಕೊಂಡು ಬಂದಿರುವ ಕಾರ್ಯಕ್ಷೇತ್ರಗಳು ಒಂದೆರೆಡಲ್ಲ. ಶಿಕ್ಷಣ, ಸಂಶೋಧನೆ, ಅನುವಾದ, ವಿಮರ್ಶೆ, ಗ್ರಂಥಸಂಪಾದನೆ, ನಿಘಂಟುಗಳ ರಚನೆ, ಸಾಹಿತ್ಯಸಂಸ್ಥೆಗಳ ನಿರ್ವಹಣೆ–ಹೀಗೆ ವೈವಿಧ್ಯಮಯ. ಇವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಎಂಟು ಸಂಪುಟಗಳ ಬೃಹತ್ ನಿಘಂಟು ರಚನೆಯಾದದ್ದು ಇವರ ಮೇರು ಸಾಧನೆ. ಪರಿಷತ್ತಿನ ಅಧ್ಯಕ್ಷರಾದಾಗ ಇವರು ಅದುವರೆಗಿನ ಅಧ್ಯಕ್ಷರಲ್ಲಿ ಅತಿ ಕಿರಿಯ ವಯಸ್ಸಿನವರಾಗಿದ್ದರು. 2010ರಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಾಗ ಅದುವರೆಗಿನ ಸಮ್ಮೇಳನಾಧ್ಯಕ್ಷರಲ್ಲಿ ಅತ್ಯಂತ ಹಿರಿಯ ಅಧ್ಯಕ್ಷರೆನಿಸಿದರು.

ಹೊಸದೇನನ್ನಾದರೂ ಕಂಡೊಡನೆ ಕುತೂಹಲಗೊಳ್ಳುವುದು, ಅದರ ಬಗ್ಗೆ ತಿಳಿಯಲು ಪ್ರಯತ್ನಿಸುವುದು ಇವರಿಗೆ ಸ್ವಭಾವಜನ್ಯ. ಇಂದಿಗೂ ಯಾವುದೇ ಹೊಸ ವಿಚಾರ ಕಿವಿಗೆ ಬಿದ್ದರೆ ಈ ಸ್ವಭಾವ ಜಾಗೃತವಾಗುತ್ತದೆ. "ಶಿಕ್ಷಕರಾದವರು ಸದಾ ಕಾಲಕ್ಕೂ ವಿದ್ಯಾರ್ಥಿಯಾಗಿರಬೇಕು" ಎಂಬ ನಾಣ್ನುಡಿಯಂತೆಯೇ ನಡೆದುಕೊಳ್ಳುವ ಇವರು ಶಿಷ್ಯವೃಂದಕ್ಕೆ, ಅಸಂಖ್ಯಾತ ಶಿಷ್ಯವೃಂದಕ್ಕೆ ಪ್ರೀತಿಯ 'ಮೇಷ್ಟ್ರು'. ವಿದ್ವಾಂಸರ ವಲಯದಲ್ಲಿ ಪ್ರೊ॥ ಜಿ.ವಿ.'

'ಬಾಳಿನಲ್ಲಿ ಎಂಥ ವಿಕ್ಷಮ ಸನ್ನಿವೇಶವೇ ಮೂಡಿಬಂದರೂ ಉತ್ಸಾಹವನ್ನು ಎಂದೂ ಕಳೆದುಕೊಳ್ಳಬಾರದು, ಪ್ರಯತ್ನ ಪೂರ್ವಕವಾಗಿ ಉತ್ಸಾಹವನ್ನು ವೃದ್ಧಿಪಡಿಸಿಕೊಳ್ಳಬೇಕು, ಸಮಾಧಾನದಿಂದ ಬಾಳಿ ಸಾಧ್ಯವಾದಷ್ಟೂ ಇತರರಿಗೆ ಸಂತೋಷ ವನ್ನು ಹಂಚಬೇಕು, ಹೆದರಿ ಕುಸಿಯಬಾರದು, ಸೋಲಲು ಒಪ್ಪದ ಮನಸ್ಸು ಗೆಲ್ಲಲ್ಲು ದುಡಿಯುವ ತಪಸ್ಸು ಇವುಗಳನ್ನು ಸಾಧಿಸು' . ಇದು ಇವರ ಪ್ರೀತಿಯ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರರ ಕೃತಿಗಳ ಅಧ್ಯಯನದಿಂದ ಪ್ರೇರಿತವಾಗಿ ತಮ್ಮ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದಿರುವ ತತ್ತ್ವಗಳು.

ಮಂಡ್ಯ ಜಿಲ್ಲೆಯ ಮುದುಗುಂದೂರು ಜಿ.ವಿ.ಯವರ ಪೂರ್ವಿಕರ ಸ್ಥಳ. ಅದು ವಿದ್ಯಾವಂತ, ಕರ್ಮಿಷ್ಠ ಬ್ರಾಹ್ಮಣರ ನೆಲೆವೀಡು. ಆ ಬ್ರಾಹ್ಮಣರಿಗೆ ಹಿಡುವಳಿಯಲ್ಲಿದ್ದ ಅಲ್ಪಸ್ವಲ್ಪ ಜಮೀನೇ ಜೀವನಾಧಾರವಾಗಿತ್ತು. ಸುಮಾರು 1875–76 ರ ಅವಧಿಯಲ್ಲಿ ಭೀಕರ ಬರಗಾಲ ಉಂಟಾಗಿತ್ತು. ಊರಿನವರೆಲ್ಲ ನೀರಿರುವ ಕಡೆಗಳಿಗೆ ವಲಸೆಹೊರಟರು. ಜಿ.ವಿಯವರ ಹಿರಿಯರು ಶ್ರೀರಂಗಪಟ್ಟಕ್ಕೆ ಬಂದು ಗಂಜಾಂನಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡರು. ವೇದ, ಉಪನಿಷತ್ತುಗಳ ಅಧ್ಯಯನ ಮಾಡಿದ್ದ ತಾತ ನರಸಿಂಹ ಜೋಯಿಸರು, ಸಂಸ್ಕೃತ, ಕನ್ನಡ ಎರಡೂ ಭಾಷೆಗಳಲ್ಲಿ ಆಳವಾದ ಪಾಂಡಿತ್ಯ ಪಡೆದಿದ್ದ ತಂದೆ ತಿಮ್ಮಣ್ಣಯ್ಯನವರು, ಮನೆಯಲ್ಲಿ ಬಾಲ್ಯದಿಂದಲೂ ನಡೆಯುತ್ತಿದ್ದ ಋಗ್ವೇದ ಅಧ್ಯಯನ ಎಲ್ಲವೂ ಜಿ.ವಿ.ಯವರಲ್ಲಿ ಜ್ಞಾನದಾಹವನ್ನು ಚಿಕ್ಕಂದಿನಿಂದಲೇ ಉಂಟು ಮಾಡಿಸಿತ್ತು. ಇಂಟರ್‌ಮೀಡಿಯೆಟ್ ಹಂತದಲ್ಲಿರುವಾಗಲೇ ಪ್ರಾಚೀನ ಇತಿಹಾಸಕ್ಕೆ ಸಂಬಂಧಿಸಿದಂತೆ ಉತ್ಕೃಷ್ಟಗ್ರಂಥವಾದ 'ಹಿಸ್ಟರಿ ಆಫ್ ಪೆಲಪನೇಶಿಯನ್‌ವಾರ್' ಎಂಬ ಪುಸ್ತಕವನ್ನು ಓದಿದ್ದ ಜಿ.ವಿ.ಯವರಿಗೆ ಕಾಲೇಜಿನಲ್ಲಿ ಎನ್. ಕಸ್ತೂರಿ, ಎಂ.ಎ. ವೆಂಕಟರಾವ್‌ರಂತಹ ಅತ್ಯುತ್ತಮ ಗುರುಗಳ ಮಾರ್ಗದರ್ಶನ ಸಿಕ್ಕತ್ತು. ಕನ್ನಡ ಪಾಠಕ್ಕೆ ಕುವೆಂಪು ಇದ್ದರು. ಮುಂದೆ ಬಿ.ಎ. ಆನರ್ಸ್‌ನಲ್ಲಿ ಮಹಾಮಹಾ ವಿದ್ವಾಂಸರಾದ ತೀ.ನಂ.ಶ್ರೀ, ಟಿ.ಎಸ್. ವೆಂಕಣ್ಣಯ್ಯ, ಡಿ.ಎಲ್. ನರಸಿಂಹಾಚಾರ್‌ರಿಂದ ಕಲಿಯುವ ಸದವಕಾಶ ಲಭಿಸಿತ್ತು.

ಒಂದು ಕಡೆ ಜ್ಞಾನದಾಹವನ್ನು ತಣಿಸಿಕೊಳ್ಳುತ್ತಿದ್ದ ಜಿ.ವಿ.ಯವರು ಕ್ರೀಡಾಕ್ಷೇತ್ರದಲ್ಲೂ ತಮ್ಮ ಪ್ರತಿಭೆಯನ್ನು ಗುರುತಿಸಿಕೊಂಡಿದ್ದರು. ಒಳಾಂಗಣ ಆಟಗಳಲ್ಲಿ ಅವರಿಗೆ ಅಪಾರ ಆಸಕ್ತಿ. ಚೆಸ್, ಕೇರಂ, ಪಿಂಗ್‌ಪಾಂಗ್ ಆಟಗಳಿಗೆ ಸೇರಿದಂತೆ ಆನರ್ಸ್ ತರಗತಿಯಲ್ಲಿದ್ದಾಗ ನಾಲ್ಕು ವರ್ಷಗಳೂ ಅವರೇ ಚಾಂಪಿಯನ್.

ಆ ಸಮಯದಲ್ಲಿ ನಡೆದ ಒಂದು ಘಟನೆ ಜಿ.ವಿ.ಯವರ ಜೀವಮಾನದ ಸ್ಮರಣೀಯ ಘಳಿಗೆಗಳಲ್ಲಿ ಒಂದು. ಮೈಸೂರಿನ ವಿದ್ಯಾರ್ಥಿ ಸಂಘದ ಸಮಾರಂಭವೊಂದಕ್ಕೆ ಅಧ್ಯಕ್ಷರಾಗಿ ಪ್ರೊ.ಎಸ್. ರಾಧಾಕೃಷ್ಣನ್ ಆಗಮಿಸಿದ್ದರು. ಬಹುಮಾನ ವಿತರಣೆ ನಡೆದಾಗ ಸಾಹಿತ್ಯ ಸ್ಪರ್ಧೆಗಳಲ್ಲಿಯೂ, ಒಳಾಂಗಣ ಆಟಗಳಲ್ಲಿಯೂ ಸಾಧಿಸಿದ್ದ ಜಿ.ವಿ.ಯವರ ಭುಜತಟ್ಟಿ 'ಗುಡ್ ಅಟ್ ಬೋತ್' ಎಂದು ಮೆಚ್ಚಿಗೆ ಸೂಚಿಸಿದ್ದರು. ರಾಧಾಕೃಷ್ಣನ್ ತಟ್ಟಿದ ಭುಜದ ಬಗ್ಗೆ ಜಿ.ವಿ.ಯವರಿಗೆ ತುಂಬ ಅಭಿಮಾನ.

ಬಿ.ಎ. ಆನರ್ಸ್‌ನಲ್ಲಿ ಪ್ರಥಮ ಸ್ಥಾನದೊಂದಿಗೆ, ನಂತರ ಕನ್ನಡ ಎಂ.ಎ. ಅದಾದ ಮೇಲೆ ಬಿ.ಟಿ. ಹೀಗೆ ಮೂರು ಮೂರು ಪದವಿಗಳನ್ನು ಪಡೆದ ಪ್ರತಿಭಾವಂತ ಜಿ.ವಿಯವರು ಶಿಕ್ಷಕ ವೃತ್ತಿ ಪ್ರಾರಂಭಿಸಿದ್ದು ಮಂಡ್ಯದ ಮುನಿಸಿಪಲ್ ಹೈಸ್ಕೂಲಿನಲ್ಲಿ. ಕನ್ನಡ ಎಂ.ಎ ಪದವಿ ಪಡೆದು ಆಂಗ್ಲಭಾಷೆಯ ಬೋಧನೆಯ ಕೆಲಸ. ತಿಂಗಳಿಗೆ ಮೂವತ್ತು ರೂಪಾಯಿ. ಕನ್ನಡ, ಇಂಗ್ಲೀಷ್ ಎರಡೂ ಭಾಷೆಗಳನ್ನು ಕರತಲಾಮಲಕ ಮಾಡಿಕೊಂಡಿದ್ದರಿಂದ ಕೆಲವೇ ದಿನಗಳಲ್ಲಿ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದರು.

ಪುಟ 7 ಕ್ಕೆ ➢

# ಪದ್ಮಶ್ರೀ ಚ. ಮು. ಕೃಷ್ಣಶಾಸ್ತ್ರಿ: ಸಂಸ್ಕೃತ ಭಾರತಿಗೆ ಗರಿ

1956ರ ಜನವರಿ 23 ರಂದು ಜನಿಸಿದ ಶ್ರೀ ಚ. ಮೂ. ಕೃಷ್ಣಶಾಸ್ತ್ರಿಯವರು ಮೂಲತಃ ಕರ್ನಾಟಕದ ದಕ್ಷಿಣಕನ್ನಡದವರು. ಶ್ರೀ ಚ. ಮು. ಕೃಷ್ಣಶಾಸ್ತ್ರಿಯವರು ಸಂಸ್ಕೃತ ಭಾಷೆಯ ಬಳಕೆ ಮತ್ತು ಪ್ರಚಾರಕ್ಕಾಗಿ ಹೊಸ ಹಾದಿಯನ್ನೇ ಹಿಡಿದು ಕೈಗೊಂಡು ವಿಶ್ವದ ಇತರೆ ದೇಶಗಳ ಸಾಲಿನಲ್ಲಿ ಭಾರತದ ನಾಗರಿಕತೆಯ ಸ್ಥಾನಮಾನವನ್ನು ಮರಳಿ ಸ್ಥಾಪಿಸಿದ ಶಿಕ್ಷಣತಜ್ಞರು. ಸಂಸ್ಕೃತವೇ ಸಮಾಜದಲ್ಲಿ ಸೌಹಾರ್ದತೆಯನ್ನು ಮೂಡಿಸುವ ಅತಿವಿಶಿಷ್ಟ ಬಂಧ ಎಂದು ಅವರು ನಂಬಿದ್ದಾರೆ. ಹಿಂದೆ ಕಲಿಸುತ್ತಿದ್ದ ವ್ಯಾಕರಣಾತ್ಮಕ ಮಾದರಿಯಲ್ಲಿ ಸಂಸ್ಕೃತವನ್ನು ಕಲಿಸುವುದರ ಬದಲಿಯಾಗಿ ಕ್ರಿಯಾರೂಪದಲ್ಲಿ ಸಂಭಾಷಣೆಯ ಭಾಷೆಯಾಗಿ ಕಲಿಸುವ ಅಭಿಯಾನವನ್ನು ಶ್ರೀ ಚ ಮೂ ಕೃಷ್ಣಶಾಸ್ತ್ರಿಯವರು ಯಶಸ್ವಿಯಾಗಿ ರೂಪಿಸಿ ಮುನ್ನಡೆಸಿದರು. ಸಂಸ್ಕೃತವನ್ನು ಮಾತನಾಡುವ ಭಾಷೆಯಾಗಿ ಉತ್ತೇಜಿಸುವುದಕ್ಕೆಂದು ಮೂರು ದಶಕಗಳ ಹಿಂದೆ ಅವರು ಮತ್ತು ಅವರ ಮಿತ್ರರು ಸೇರಿ 'ಸಂಸ್ಕೃತ ಭಾರತಿ' ಸಂಘಟನೆಯನ್ನು ಆರಂಭಿಸಿದರು. ಈಗ ಸಂಸ್ಕೃತ ಭಾರತಿಯು ಭಾರತದ ಮೂಲೆ ಮೂಲೆಗಳಲ್ಲಿ ಹರಡಿದೆ; ಅಮೆರಿಕಾ, ಕೆನಡಾ, ಇಂಗ್ಲೆಂಡ್, ಆಸ್ಟ್ರೇಲಿಯಾ & ಪಶ್ಚಿಮ ಏಶ್ಯಾ ದೇಶಗಳಲ್ಲಿ ಈ ಸಂಘಟನೆಯು ಪ್ರಬಲ ಅಸ್ತಿತ್ವವನ್ನು ಹೊಂದಿದೆ.

ಶ್ರೀ ಚ ಮು ಕೃಷ್ಣಶಾಸ್ತ್ರಿಯವರ ಪ್ರಯತ್ನಗಳಿಂದ 10 ದಿನಗಳಲ್ಲಿ ಸಂಸ್ಕೃತವನ್ನು ಸಂಭಾಷಣಾ ಭಾಷೆಯಾಗಿ ಕಲಿಸುವ ಶಿಬಿರಗಳು ರೂಪುಗೊಂಡವು. ಈ ಶಿಬಿರಗಳಿಂದ ಈವರೆಗೆ 90 ಲಕ್ಷಕ್ಕೂ ಹೆಚ್ಚು ಜನರಿಗೆ ಸಂಭಾಷಣಾ ಸಂಸ್ಕೃತವನ್ನು ಕಲಿಸಲಾಗಿದೆ. ಅವರ ಪ್ರಯತ್ನಗಳಿಂದ ಹಲವು ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಸಂಸ್ಕೃತಕ್ಕಾಗಿ ಸಂವಹನಾ ಶಿಕ್ಷಣ ವಿಧಾನಗಳನ್ನು ರೂಪಿಸಲಾಗಿದೆ. 'ಸಂಸ್ಕೃತ ಮನೆಗಳು', 'ಸಂಸ್ಕೃತ ಮಾತೃಭಾಷಾ ಮಕ್ಕಳು' ? ಈ ಪ್ರಯೋಗಗಳೂ ಅಪಾರ ಯಶಸ್ಸನ್ನು ಕಂಡಿವೆ. ಅವರು ಸಂಸ್ಕೃತಪ್ರಚಾರಕ್ಕಾಗಿ ಒಂದು ದೊಡ್ಡ ಕಾರ್ಯಪಡೆಗೇ ಸ್ಫೂರ್ತಿಯಾಗಿದ್ದಾರೆ; ಈ ಕಾರ್ಯಕರ್ತರು ಈಗ ಹಲವು ರಾಜ್ಯಗಳಲ್ಲಿ ಸಕ್ರಿಯರಾಗಿದ್ದಾರೆ. ಸಂಸ್ಕೃತ ಭಾರತಿಯು ನೀಡುತ್ತಿರುವ ಹಲವು ಸಂಸ್ಕೃತ ಭಾಷಾ ಕಲಿಕೆ ಕೋರ್ಸುಗಳನ್ನು ಸಾವಿರಾರು ಜನರು ಕಲಿಯುತ್ತಿದ್ದಾರೆ. ಅಮೆರಿಕಾದಲ್ಲಿ ಎಸ್‌ಎಫ್‌ಎಲ್ (SAFL) ಎಂಬುದು ಅಲ್ಲಿನ ಭಾರತೀಯ ಮೂಲದ ಮಕ್ಕಳ ತುಂಬಾ ಜನಪ್ರಿಯವಾಗಿರುವ ಕೋರ್ಸ್.

ಶ್ರೀ ಚ. ಮು. ಕೃಷ್ಣಶಾಸ್ತ್ರಿಯವರು ಸಂಸ್ಕೃತದಲ್ಲಿ 14 ಪುಸ್ತಕಗಳನ್ನು ಬರೆದಿದ್ದಾರೆ. 'ಸರಸ್ವತಿ ಸೇವಾ' ಎಂಬ ಯೋಜನೆಯ ಮೂಲಕ ನೂರಾರು ಭಾರತೀಯ ಮತ್ತು ವಿದೇಶಿ ಭಾಷೆಗಳ ಗ್ರಂಥಗಳನ್ನು ಸಂಸ್ಕೃತಕ್ಕೆ ಅನುವಾದಿಸಲಾಗುತ್ತಿದೆ. ಸಂಸ್ಕೃತದಲ್ಲಿ ಆಧುನಿಕ ವಿಷಯಗಳ ಪುಸ್ತಕಗಳನ್ನು ಬರೆಯಲು ಮತ್ತು ಯುವ ಲೇಖಕರನ್ನು ಪ್ರೋತ್ಸಾಹಿಸಲು ಅವರು 'ಸಂಸ್ಕೃತ ಪುಸ್ತಕ ಮೇಳ' ಮತ್ತು 'ಸಾಹಿತ್ಯೋತ್ಸವ'ಗಳನ್ನು ಸಂಘಟಿಸಿದ್ದಾರೆ.

ಶಿಕ್ಷಣ ಮತ್ತು ಕಲಿಕಾ ವಿಧಾನದಲ್ಲಿ ವ್ಯಾಪಕ ಅನುಭವವನ್ನು ಹೊಂದಿರುವ ಹಿನ್ನೆಲೆಯಲ್ಲಿ ಶ್ರೀ ಚ ಮೂ ಕೃಷ್ಣಶಾಸ್ತ್ರಿಯವರು ರಾಷ್ಟ್ರೀಯ ಸಂಸ್ಕೃತ ಪ್ರತಿಷ್ಠಾನ ಮತ್ತು ಹಲವು ವಿಶ್ವವಿದ್ಯಾಲಯಗಳ ಮಂಡಳಿಗಳಲ್ಲಿ ಸದಸ್ಯರಾಗಿದ್ದಾರೆ. 'ಸಂಸ್ಕೃತದ ಅಭಿವೃದ್ಧಿಗಾಗಿ ಒಂದು ಮಾರ್ಗಸೂಚಿ – ಹತ್ತು ವರ್ಷಗಳ ದೃಷ್ಟಿಕೋನ ಯೋಜನೆ' ವರದಿಯನ್ನು 2016ರಲ್ಲಿ ಸಲ್ಲಿಸಿದ ಕೇಂದ್ರ ಸರ್ಕಾರವು ರಚಿಸಿದ್ದ ಸಂಸ್ಕೃತ ಸಮಿತಿಯಲ್ಲಿ ಅವರೂ ಒಬ್ಬ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಶ್ರೀ ಚ ಮು ಕೃಷ್ಣಶಾಸ್ತ್ರಿಯವರು ತುಂಬಾ ಬೇಡಿಕೆಯಲ್ಲಿರುವ ಜನಪ್ರಿಯ ಭಾಷಣಕಾರರು. ಅವರು ಸಂಸ್ಕೃತದಲ್ಲಿ ಎಲ್ಲರಿಗೂ ತಿಳಿಯುವಂತಹ ಮನೋರಂಜನಾತ್ಮಕ, ಶಿಕ್ಷಣಾತ್ಮಕ ಶೈಲಿಯಲ್ಲಿ ನಿರರ್ಗಳವಾಗಿ, ಪ್ರಖರವಾಗಿ ಮಾತನಾಡಬಲ್ಲ ಪರಿಣತರು. ಯಾವುದೇ ಫಲಾಪೇಕ್ಷೆಯಿಲ್ಲದೆ ಕಾರ್ಯ ನಿರ್ವಹಿಸಬೇಕೆಂಬ ಭಗವದ್ಗೀತೆಯ ನೀತಿಯಂತೆಯೇ ನಡೆದುಕೊಳ್ಳುತ್ತಿರುವ ಶ್ರೀ ಚ. ಮು. ಕೃಷ್ಣಶಾಸ್ತ್ರಿಯವರು ಇಂದು ಭಾರತದಲ್ಲಿ ಸಂಸ್ಕೃತ ಭಾಷೆಯನ್ನು ಜನರತ್ತ ಒಯ್ದ ಭಾಷಾ ಕಾರ್ಯಕರ್ತರಾಗಿದ್ದಾರೆ.

ಶ್ರೀಯುತರು ಸಂಸ್ಕೃತ, ಕನ್ನಡ, ಹಿಂದಿ, ಇಂಗ್ಲಿಷ್, ತುಳು ಮತ್ತು ತೆಲುಗು ಮುಂತಾದ ಹಲವು ಭಾಷೆಗಳನ್ನು ಬಲ್ಲವರು. ಇತ್ತೀಚಿನವರೆಗೂ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಲ್ಲಿ ಹಿರಿಯ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದರು. ರಾಷ್ಟ್ರೀಯ ಮ್ಯಾನ್ಯುಸ್ಕ್ರಿಪ್ಟ್ ಮಿಶನ್ ಕಾರ್ಯಕಾರಿ ಸಮಿತಿ ಸದಸ್ಯರು, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಸಂಸ್ಕೃತ ಪ್ರತಿಷ್ಠಾನದ ಆಡಳಿತ ಮಂಡಳಿ ಸದಸ್ಯರು. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಹೊಸದೆಹಲಿಯ ಎಲ್.ಎಲ್.ಬಿ.ಎಸ್. ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರು, ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರು.

## ಕೊಡುಗೆಗಳು

1981 ರಿಂದ ಸಂಸ್ಕೃತ ರಂಗದಲ್ಲಿ ಶಿಕ್ಷಣಕ್ಕಾಗಿ ಸಮಯ ನೀಡಿ ಸ್ವಯಂಸೇವಾ ಕಾರ್ಯಕರ್ತರಾಗಿದ್ದಾರೆ. ತನ್ಮೂಲಕ ಸಂಸ್ಕೃತವನ್ನೇ ತಮ್ಮ ಜೀವನಧ್ಯೇಯವಾಗಿಸಿಕೊಳ್ಳಲು ಸಾವಿರಾರು ಯುವ ಜನರಿಗೆ ಸ್ಫೂರ್ತಿಯಾಗಿದ್ದಾರೆ. 'ಸರಳ ಸಂಸ್ಕೃತ ಸಂಭಾಷಣಾ ಪದ್ಧತಿ' ಎಂಬ ಹೊಸ ಸಂಸ್ಕೃತ ಕಲಿಕಾ ವಿಧಾನ ರೂಪಿಸಿದ್ದಾರೆ. 1981 ರಲ್ಲಿ ಸಂಸ್ಕೃತ ಸಂಭಾಷಣಾ ಚಳುವಳಿ ಆರಂಭ ಮಾಡಿದರು. ಇವರು 13 ಪುಸ್ತಕಗಳನ್ನು ರಚಿಸಿದ್ದಾರೆ. ಸಂಸ್ಕೃತದ ಹಳ್ಳಿಗಳು, ಮನೆಗಳನ್ನು ರೂಪಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ. 1987 ರಲ್ಲಿ ಕಾಶೀ ಪಂಡಿತ್ ಪರಿಷತ್‌ನಿಂದ ಸಾರಸ್ವತ ಸುಧಾಕರ, 1985 ರಲ್ಲಿ ರಾಷ್ಟ್ರೀಯ ಯುವ ಪುರಸ್ಕಾರ ಇವರಿಗೆ ಸಂದಿದೆ. ಅನಂತರ ಅವರು ಯಾವುದೇ ಪ್ರಶಸ್ತಿಗಳನ್ನು ಸ್ವೀಕರಿಸದಿರುವ ನಿಲುವು ತಾಳಿದ್ದರು. ಈಗ ಅವರಿಗೆ ಪದ್ಮಶ್ರೀಯ ಗರಿ ಎಲ್ಲರಿಗೂ ಹೆಮ್ಮೆಯೇ ಸರಿ.

•

ಶಿಕ್ಷಣ ಸೌರಭ

# ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ. ಎಸ್. ಎ.) ಒಂದು ಅವಲೋಕನ

➢ ಹಿಂದಿನ ಸಂಚಿಕೆಯಿಂದ...

ವಿ. ರಾಜ
ರಾಜ್ಯ ಶೈಕ್ಷಣಿಕ ಪ್ರಕೋಷ್ಠ ಪ್ರಮುಖರು
ಕರ್ನಾಟಕ ರಾಜ್ಯ
ಮಾಧ್ಯಮಿಕ ಶಿಕ್ಷಕ ಸಂಘ



## ಗುಣಮಟ್ಟ

ಅಗತ್ಯ ಮೂಲ ಸೌಲಭ್ಯಗಳಾದ ಕಪ್ಪು ಹಲಗೆ, ಪೀಠೋಪಕರಣಗಳು, ಗ್ರಂಥಾಲಯ, ವಿಜ್ಞಾನ ಮತ್ತು ಗಣಿತ ಪ್ರಯೋಗಾಲಯ, ಗಣಕಯಂತ್ರ ಪ್ರಯೋಗಾಲಯಗಳು, ಶೌಚಾಲಯಗಳನ್ನು ಒದಗಿಸಲಾಗುವುದು.

ಹೆಚ್ಚುವರಿ ಶಿಕ್ಷಕರು, ಸೇವಾನಿರತ ಶಿಕ್ಷಕರಿಗೆ ತರಬೇತಿ ನೀಡಲಾಗುವುದು. ಮಕ್ಕಳಿಗೆ ಕಲಿಕೆ ಸಾಮರ್ಥ್ಯ ಹೆಚ್ಚಿಸಲು ಸೇತು ಬಂಧ ತರಗತಿಗಳು. ಗ್ರಾಮಾಂತರ ಮತ್ತು ಕಠಿಣ ಪ್ರದೇಶ, ಬೆಟ್ಟ ಪ್ರದೇಶದ ಶಿಕ್ಷಕರಿಗೆ ವಸತಿ ಸೌಕರ್ಯ. ಮಹಿಳಾ ಬೋಧಕರಿಗೆ ಆದ್ಯತೆಯ ಮೇರೆಗೆ ವಸತಿ ನೀಡಲಾಗುವುದು.

## ಸಮಾನತೆ

ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಹಾಸ್ಟೆಲ್‌ಗಳು / ವಸತಿ ಶಾಲೆಗಳು, ನಗದು ಉತ್ತೇಜಕಗಳು, ಸಮವಸ್ತ್ರ, ಪುಸ್ತಕಗಳು, ಹೆಣ್ಣು ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯಗಳು ಪ್ರೌಢ / ಮಾಧ್ಯಮಿಕ ಹಂತದಲ್ಲಿ ಅರ್ಹತೆಯಿರುವ ವಿದ್ಯಾರ್ಹತೆಯಿರುವ/ ಅಗತ್ಯವಿರುವ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವುದು.

ಸರ್ವಾಂಗೀಣ ಶಿಕ್ಷಣವು ಎಲ್ಲ ಚಟುವಟಿಕೆಗಳ ವಿಭಿನ್ನ ಸಾಮರ್ಥ್ಯ ಹೊಂದಿರುವ ಮಕ್ಕಳಿಗೆ ಎಲ್ಲ ಶಾಲೆಗಳಲ್ಲಿ ಅಗತ್ಯ ಸೌಲಭ್ಯ ದೊರಕಿಸಲು ಪ್ರಯತ್ನ ಮುಕ್ತ ಮತ್ತು ದೂರ ಶಿಕ್ಷಣದ ಅಗತ್ಯಗಳ ವಿಸ್ತರಣೆ, ವಿಶೇಷವಾಗಿ ಯಾರಿಗೆ ಪೂರ್ಣಾವಧಿ ಪ್ರೌಢ / ಮಾಧ್ಯಮಿಕ ಶಿಕ್ಷಣವನ್ನು ಮುಂದುವರೆಸಲು ಆಗುವುದಿಲ್ಲವೋ, ಅಂಥಹವರಿಗಾಗಿ/ ಮತ್ತು ಪೂರಕವಾಗಿ/ ಮುಖಾಮುಖಿ ಬೋಧನೆಯ ಹೆಚ್ಚಳ. ಈ ವ್ಯವಸ್ಥೆಯಿಂದ ಶಾಲೆಯಿಂದ ಹೊರಗಿರುವ ಮಕ್ಕಳ ಶಿಕ್ಷಣಕ್ಕೆ ತುಂಬ ಸಹಾಯಕ ವಾಗುವುದು. ಸಾಂಸ್ಥಿಕ ಪರಿವರ್ತನೆ ಮತ್ತು ಸಂಪನ್ಮೂಲ ಸಂಸ್ಥೆಗಳನ್ನು ಬಲಪಡಿಸುವುದು.

ಕೇಂದ್ರದ ಸಹಾಯಕ್ಕೆ ರಾಜ್ಯಗಳು ಅಗತ್ಯ ಆಡಳಿತಾತ್ಮಕ ಪರಿವರ್ತನೆ ಮಾಡುವುದು ಪೂರ್ವ ಶರತ್ತಾಗಿರುವುದು. ಸಂಸ್ಥಾ ಪರಿವರ್ತನೆಯು ಒಳಗೊಂಡಿರವವು ಶಾಲಾ ಆಡಳಿತ ಪರಿವರ್ತನೆಯು – ತಮ್ಮ ನಿರ್ವಹಣೆ ಮತ್ತು ಉತ್ತರ ದಾಯಿತ್ವ ವನ್ನು ವಿಕೇಂದ್ರಿಕರಿಸಿ ಶಾಲೆಯ ಸಾಧನೆಯನ್ನು ಸುಧಾರಿಸುವುದು.

ವಿವೇಚನಾಯುಕ್ತ ನೀತಿಯ ಮೇರೆಗೆ ಶಿಕ್ಷಕರ ನೇಮಕಾತಿ ನಿವೃತ್ತಿ, ತರಬೇತಿ, ಸಂಭಾವನೆ ಮತ್ತು ವೃತ್ತಿಯಲ್ಲಿ ಮುಂಬಡ್ತಿ.

ಶಾಲಾ ಆಡಳಿತದಲ್ಲಿ ನವೀಕರಣ / ಇ–ಆಡಳಿತ, ವಿಕೇಂದ್ರಿಕರಣಗಳು ಸೇರಿದಂತೆ ಸುಧಾರಣೆ ಮಾಡುವುದು.

## ಪಂಚಾಯತ್ ರಾಜ್ ಸಂಸ್ಥೆಗಳ ತೊಡಗಿಸುವಿಕೆ

ಪಂಚಾಯತ್ ರಾಜ್ ಸಂಸ್ಥೆಗಳ, ಮುನಿಸಿಪಾಲಿಟಿ ಸಂಸ್ಥೆಗಳ, ಸಮುದಾಯದ ತಾಯಿತಂದೆಯರು, ಪ್ರೌಢ/ಮಾಧ್ಯಮಿಕ ಶಿಕ್ಷಣದಲ್ಲಿ ಹಿತಾಸಕ್ತಿ ಇರುವ ವ್ಯವಸ್ಥಾಪಕರ, ಶಾಲಾ ಆಡಳಿತ ಸಮಿತಿ, ಶಿಕ್ಷಕ–ತಂದೆ ತಾಯಿ ಪೋಷಕರ ಸಮಿತಿ, ಶಿಕ್ಷಕರ ಸಂಘಗಳನ್ನು ಯೋಜನಾ ಪ್ರಕ್ರಿಯೆ, ಅನುಷ್ಠಾನ, ಮೇಲುಸ್ತುವಾರಿ ಮತ್ತು ಮೌಲ್ಯಮಾಪನಗಳಲ್ಲಿ ತೊಡಗಿಸಿಕೊಳ್ಳಬೇಕು.

ಕೇಂದ್ರ ಸರ್ಕಾರವು ನಾಲ್ಕು ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಕೈಗೊಂಡಿದೆ. ಶಾಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ರಾಜ್ಯಸರ್ಕಾರಗಳಿಗೆ, ಕಂಪ್ಯೂಟರ್ ಶಿಕ್ಷಣಕ್ಕಾಗಿ, ಪ್ರೌಢ/ ಮಾಧ್ಯಮಿಕ ಮತ್ತು ಹಿರಿಯ ಪ್ರೌಢ / ಮಾಧ್ಯಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಸಹಾಯದ ಶಿಕ್ಷಣ ನೀಡುವುದಕ್ಕಾಗಿ.

- ವಿಕಲಚೇತನ ಮಕ್ಕಳಿಗೆ ಸಮಗ್ರ (ಇಂಟಿಗ್ರೇಟೆಡ್) ಶಿಕ್ಷಣವನ್ನು ಮುಖ್ಯವಾಹಿನಿಯ ಶಾಲಾ ಶಿಕ್ಷಣದಲ್ಲಿಯೇ ಕೊಡಲು ರಾಜ್ಯ ಸರ್ಕಾರಗಳಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ
- ಪ್ರೌಢ / ಮಾಧ್ಯಮಿಕ ಮತ್ತು ಹಿರಿಯ ಪ್ರೌಢ / ಮಾಧ್ಯಮಿಕ ಶಾಲೆಗಳಲ್ಲಿ ಹೆಣ್ಣು ಹುಡುಗಿಯರಿಗೆ ವಸತಿನಿಲಯ (ಹಾಸ್ಟೆಲ್) ಸೌಲಭ್ಯ ಹೆಚ್ಚಿಸಲು ( ಲಭ್ಯತೆ ಮತ್ತು ಸಮತ್ವ) ಗ್ರಾಮೀಣ ಪ್ರದೇಶದ ಸರಕಾರೇತರ ಸಂಸ್ಥೆಗಳಿಗೆ ಹುಡುಗಿಯರ ವಸತಿನಿಲಯ (ಹಾಸ್ಟೆಲ್) ನಡೆಸಲು ಸಹಾಯ ಮಾಡುವುದು. ಮತ್ತು
- ಶಾಲೆಗಳಲ್ಲಿ ಗುಣಮಟ್ಟ ಸುಧಾರಣೆಗಾಗಿ ರಾಜ್ಯಸರ್ಕಾರಗಳಿಗೆ ಯೋಗಾಭ್ಯಾಸದ ತರಗತಿ ಪ್ರಾರಂಭಿಸಲು, ಶಾಲೆಯಲ್ಲಿನ ವಿಜ್ಞಾನ ಬೋಧನೆಯನ್ನು ಅಭಿವೃದ್ಧಿಪಡಿಸಲು ಪರಿಸರ ಶಿಕ್ಷಣ ಮತ್ತು ಜನಸಂಖ್ಯಾ ಶಿಕ್ಷಣ ಅಲ್ಲದೆ ಅಂತರಾಷ್ಟ್ರೀಯ ವಿಜ್ಞಾನ, ಒಲಂಪಿಯಾಡ್ ಗಳಿಗೆ ಸಹಾಯ ಮಾಡುವುದು, ಈ ಎಲ್ಲ ಕಾರ್ಯ ಕ್ರಮಗಳು ಈಗಿರುವ ರೂಪದಲ್ಲಿ ಇಲ್ಲವೆ ಸುಧಾರಿತ ರೂಪದಲ್ಲಿ ಹೊಸ ಕಾರ್ಯ ಕ್ರಮದಲ್ಲಿರುವವು.
- ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಕಲಿಯುವಾಗಲೆ ಗಳಿಸುವ ಸೌಲಭ್ಯವನ್ನು ಸ್ವಉದ್ಯೋಗ ಇಲ್ಲವೆ ಅರೆಕಾಲಿಕ

ಪುಟ 10 ಕ್ಕೆ ➢

# ಜನವರಿ 2017ರ ಸಂಚಿಕೆಯಲ್ಲಿ ಪ್ರಕಟವಾದ ಸತ್ತೋಲೆಗೆ ಸ್ಪಷ್ಟೀಕರಣ ನೀಡುವ ಸಲುವಾಗಿ 25.05.2016 ರ ಸುತ್ತೋಲೆಯನ್ನು ಪ್ರಕಟಿಸಲಾಗುತ್ತಿದೆ.

## ಸುತ್ತೋಲೆ

## ಕರ್ನಾಟಕ ಸರ್ಕಾರ

**ಸಂಖ್ಯೆ: ಇಡಿ124 ಎಲ್‌ಬಿ ಪಿ 2016** **ದಿನಾಂಕ: 25.05.2016**

**ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು,**

**ವಿಷಯ: ಸರ್ಕಾರಿ/ ಖಾಸಗಿ ಪ್ರೌಢಶಾಲೆಯಲ್ಲಿ ಹಾಜರಾತಿ ನಿರ್ವಹಣೆ ಮತ್ತು ಜೇಷ್ಟತೆ ಆಧಾರದ ಮೇಲೆ ಮುಖ್ಯೋಪಾಧ್ಯಾಯರ/ಪ್ರಾಂಶುಪಾಲರ ಹುದ್ದೆಗೆ ಪ್ರಭಾರ ವಹಿಸುವ ಬಗ್ಗೆ.**

**ಉಲ್ಲೇಖ: ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಸಿ4 (5) ಪ್ರೌಶಿ. ಇತರೆ 02/2015-16 ದಿ:28.03.2016**

ಸರ್ಕಾರಿ/ ಖಾಸಗಿ ಪ್ರೌಢಶಾಲೆಗಳಲ್ಲಿ ಹಾಜರಾತಿ ನಿರ್ವಹಣೆ ಬಗ್ಗೆ ಮತ್ತು ಮುಖ್ಯ ಶಿಕ್ಷಕರ ಪ್ರಭಾರಿ ಕಾರ್ಯಭಾರ ಬಗ್ಗೆ ಹಲವು ಸಂಘ ಸಂಸ್ಥೆಗಳು ಅನೇಕ ವರ್ಷಗಳಿಂದ ಬೇಡಿಕೆ ಸಲ್ಲಿಸಿರುವುದರಿಂದ ಶಿಕ್ಷಕರ ಬೇಡಿಕೆಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದೆ ಹಾಗೂ ಉಲ್ಲೇಖಿತ ಆಯುಕ್ತರ ಪತ್ರದಲ್ಲಿನ ಶಿಫಾರಸ್ಸು ಆಧರಿಸಿ ಇನ್ನು ಮುಂದೆ ಸರ್ಕಾರಿ/ ಖಾಸಗಿ ಪ್ರೌಢಶಾಲೆಗಳಲ್ಲಿ ಮುಖ್ಯಶಿಕ್ಷಕರ ಹುದ್ದೆ ಖಾಲಿ ಇದ್ದ ಸಂದರ್ಭದಲ್ಲಿ, ಸದರಿ ಶಾಲೆಯಲ್ಲಿನ ಮುಖ್ಯ ಶಿಕ್ಷಕರ ಹೆಸರಿನ ನಂತರ ಆ ಶಾಲೆಯ ಶಿಕ್ಷಕರುಗಳ ಹೆಸರುಗಳನ್ನು ಶಾಲಾ ಸೇವಾ ಜೇಷ್ಠತೆ ಆಧಾರದ ಮೇಲೆ ಹಾಜರಾತಿ ವಹಿಯಲ್ಲಿ ಅನುಕ್ರಮವಾಗಿ ನಮೂದಿಸಿ ಪ್ರಭಾರದಲ್ಲಿರಿಸುವ ಕುರಿತು ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

1. ಸರ್ಕಾರಿ/ಖಾಸಗಿ ಪ್ರೌಢಶಾಲೆಗಳಲ್ಲಿ ಹಾಜರಾತಿ ನಿರ್ವಹಣೆ ವಹಿ ನಿರ್ವಹಣೆಯನ್ನು ಮುಖ್ಯ ಶಿಕ್ಷಕರ ಹೆಸರಿನ ನಂತರ ಸದರಿ ಶಾಲೆಯ ಶಿಕ್ಷಕರುಗಳ ಹೆಸರುಗಳನ್ನು ಶಾಲಾ ಸೇವಾ ಜೇಷ್ಟತೆ ಆಧಾರದ ಮೇಲೆ ನಮೂದಿಸತಕ್ಕದ್ದು, ನಂತರ ಬೋಧಕೇತರ ಹೆಸರುಗಳನ್ನು ನಮೂದಿಸತಕ್ಕದ್ದು.
2. ಸರ್ಕಾರಿ/ ಖಾಸಗಿ ಪ್ರೌಢಶಾಲೆಗಳಲ್ಲಿ ಖಾಯಂ ಮುಖ್ಯ ಶಿಕ್ಷಕರು ಇಲ್ಲದ ಸಂದರ್ಭದಲ್ಲಿ ಅಥವಾ ರಜೆ ಹೋದ ಸಂದರ್ಭದಲ್ಲಿ ಸಂಪೂರ್ಣವಾಗಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಶಾಲೆಯ ಪ್ರಭಾರವನ್ನು ಸದರಿ ಶಾಲಾ ಜೇಷ್ಟತೆ ಹೊಂದಿರುವ (ಎಲ್ಲಾ ಶಿಕ್ಷಕರನ್ನು ಒಳಗೊಂಡಂತೆ) ಶಿಕ್ಷಕರುಗಳಿಗೆ ವಹಿಸತಕ್ಕದ್ದು. ಆದರೆ, ಈ ರೀತಿ ಕ್ರಮ ಜರುಗಿಸುವಾಗ ಕರ್ನಾಟಕ ನಾಗರೀಕ ಸೇವಾ ನಿಯಮ 32 ಪ್ರಭಾರದಲ್ಲಿಡತಕ್ಕದ್ದಲ್ಲ.

**(ಅಜಯ್ ಸೇಠ್)**, ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)

---

➢ **ಪುಟ 4 ರಿಂದ.....** **ಶತಾಯುಷಿ ಜಿ.ವಿ....**

ಅದೊಂದು ದಿನ ಜಿ.ವಿ ತರಗತಿಯಲ್ಲಿದ್ದರು. ವಿದ್ಯಾ ಇಲಾಖೆಯಲ್ಲಿ ಡೆಪ್ಯೂಟಿ ಡೈರೆಕ್ಟರ್ ಆಗಿದ್ದ ಡಾ॥ ಕಿನಿ ಇವರ ತರಗತಿಗೆ ಬಂದರು. ಅದು 'ಸರ್‌ಪ್ರೈಸ್ ಇನ್ಸ್‌ಪೆಕ್ಷನ್' ಆಗಿತ್ತು. ಅದುವರೆಗಾಗಲೇ ತರಗತಿಯ ಅವಧಿ ಮುಗಿಯುತ್ತ ಬಂದಿತ್ತು. ಪೂರೈಸಿದ್ದ ಪಾಠದ ಬಗ್ಗೆ ಒಂದೆರಡು ಮೂರು ಪ್ರಮುಖ ಅಂಶಗಳನ್ನು ಗುರುತು ಹಾಕಿಕೊಳ್ಳಲು ವಿದ್ಯಾರ್ಥಿಗಳಿಗೆ ಸೂಚಿಸಿ ಜಿ.ವಿ ಮೌನವಾಗಿ ಕುಳಿತಿದ್ದರು. ಅದವರ ಕ್ರಮವಾಗಿತ್ತು. ಕಡೆಯ ಬೆಂಚಿನಲ್ಲಿ ಸದ್ದಿಲ್ಲದೆ ಬಂದು ಕುಳಿತಿದ್ದ ಡಿ.ಡಿ ಯಾವ ಪಾಠವೂ ನಡೆಯುತ್ತಿಲ್ಲವೆಂದು ವ್ಯಗ್ರರಾಗಿದ್ದರು. ಜಿ.ವಿಯವರಿಗೆ ಅವರು ಯಾರೆಂದೂ ತಿಳಿಯಲಿಲ್ಲ.

ಸಂಜೆ ಮೀಟಿಂಗ್‌ನಲ್ಲಿ ಅಧಿಕಾರಿ ಹೇಳಿದ್ದರು 'ಯುವರ್ ಕ್ಲಾಸ್ ವಾಸ್ ಎ ಟ್ರ್ಯಾಜಿಡಿ' ಧೈರ್ಯವಾಗಿ ಉತ್ತರಿಸಿದ್ದರು. ಜಿ.ವಿ.ಯು 'ಕೇಮ್ ಓನ್ಲಿ ಅಟ್ ದಿ ಲಾಸ್ಟ್ ಮಿನಿಟ್'. ಅಧಿಕಾರಿ ಅವರನ್ನೇ ಕೆಕ್ಕರಿಸಿ ನೋಡುತ್ತಾ ಹೇಳಿದ್ದರು, 'ಓಕೆ. ಯಂಗ್ ಮ್ಯಾನ್, ಐ ವಿಲ್ ಕಂ ಟುಮಾರೋ ಟು ಯುವರ್ ಕ್ಲಾಸ್'. ಸಿಬ್ಬಂದಿಯವರೆಲ್ಲ 'ಇನ್ನವರು ಜಿ.ವಿ ಕೆರಿಯರ್ ಹಾಳು ಮಾಡುತ್ತಾರೆ' ಎಂದುಕೊಂಡರು. ಮಾರನೇ ದಿನ ಜಿ.ವಿ ತರಗತಿಯಲ್ಲಿ ಉಪನ್ಯಾಸ ಮಾಡುವ ರೀತಿಯನ್ನು ವೀಕ್ಷಿಸಿದ ಅಧಿಕಾರಿ ನಿಬ್ಬೆರಗಾಗಿದ್ದರು. ತರಗತಿ ಮುಗಿದಾಗ ಜಿ.ವಿ ಯವರಿಗೆ ಹಸ್ತಾಲಾಘವ ಮಾಡಿ 'ಯು ಆರ್ ಎನ್ ಎಕ್ಸಲೆಂಟ್ ಟೀಚರ್, ಕೀಪ್ ಇಟ್ ಅಪ್' ಎಂದು ಪ್ರಶಂಸಿಸಿದ್ದರು.

1973 ರಲ್ಲಿ ಅಧ್ಯಾಪನ ವೃತ್ತಿಯಿಂದ ನಿವೃತ್ತರಾದ ಜಿ.ವಿ ಯವರು ಮೂರು ಪೀಳಿಗೆಗಳ ವಿದ್ಯಾರ್ಥಿಗಳಿಗೆ ಪಾಠ ಮಾಡಿರುವ 'ಮೇಷ್ಟ್ರು'. ಬದುಕು-ಬರಹ, ನಡೆ-ನುಡಿ ಎರಡರಿಂದಲೂ ಶಿಕ್ಷಣ ನೀಡುತ್ತಿರುವ ಈ ಹಿರಿಯರಿಗೆ 'ಪದ್ಮಶ್ರೀ' ಪುರಸ್ಕಾರ ಸಂದಿರುವ ಶುಭ ಸಂದರ್ಭದಲ್ಲಿ ಎಲ್ಲ ವಿದ್ಯಾರ್ಥಿಗಳ, ಶಿಕ್ಷಕರ, ಕನ್ನಡಿಗರ ಅಭಿನಂದನೆಗಳು.

✍ **ನಂ. ನಾಗಲಕ್ಷ್ಮಿ**

# ಮುಂದಿನ ವರ್ಷದಿಂದ ಕನಿಷ್ಠ ಕಲಿಕಾಮಟ್ಟ ಕಡ್ಡಾಯ

ಮುಂದಿನ ಶೈಕ್ಷಣಿಕ ವರ್ಷದಿಂದ (2017–18) ಎಲ್ಲ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಪ್ರಾಥಮಿಕ ತರಗತಿಗಳ ವಿದ್ಯಾರ್ಥಿಗಳು ವರ್ಷದ ಕೊನೆಗೆ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ನಿಗದಿಪಡಿಸಿರುವ ಕನಿಷ್ಠ ಕಲಿಕಾ ಮಟ್ಟವನ್ನು ಹೊಂದುವುದು ಕಡ್ಡಾಯ.

ಶಾಲೆಗಳು, ಪೋಷಕರು ಮತ್ತು ಸಂಬಂಧಿಸಿದವರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು (1 ರಿಂದ 8ನೇ ತರಗತಿವರೆಗೆ) ಹೊಂದಿರಬೇಕಾದ ಕನಿಷ್ಠ ಕಲಿಕಾ ಮಟ್ಟವನ್ನು ನಿಗದಿಪಡಿಸಿದ್ದೇವೆ. ಇದನ್ನು ಶಿಕ್ಷಣ ಹಕ್ಕು (ಆರ್‌ಟಿಇ) ನಿಯಮಗಳ ಭಾಗವನ್ನಾಗಿ ಮಾಡುತ್ತೇವೆ. 2017–18 ರಿಂದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳು ಹೊಸ ನಿಯಮವನ್ನು ಪಾಲಿಸುವುದು ಕಡ್ಡಾಯ ಎಂದು ಎಚ್‌ಆರ್‌ಡಿ ಸಚಿವ ಪ್ರಕಾಶ್ ಜಾವಡೇಕರ್ ಭಾನುವಾರ ಹೇಳಿದರು.

'ಉತ್ತಮ ಜ್ಞಾನ ಸಂಪಾದನೆಗಾಗಿ ಗುಣಮಟ್ಟದ ಶಿಕ್ಷಣ ಪಡೆಯಲು ಇದು ವಿದ್ಯಾರ್ಥಿಗಳಿಗೆ ನೆರವಾಗಲಿದೆ. ಮಕ್ಕಳಿಗೆ, ಬೋಧಿಸುವ ಶಿಕ್ಷಕರಿಗೂ ಸಹಕಾರಿಯಾಗಲಿದೆ. ಇದು ಆರ್‌ಟಿಇ ನಿಯಮದ ಭಾಗವಾಗಿರಲಿರುವುದರಿಂದ ಶೈಕ್ಷಣಿಕ ವರ್ಷದ ಕೊನೆಗೆ ಪ್ರತಿ ವಿದ್ಯಾರ್ಥಿ/ನಿ ಕನಿಷ್ಠ ಕಲಿಕಾ ಮಟ್ಟವನ್ನು ಸಾಧಿಸುವಂತೆ ಶಾಲೆಗಳು ಮಾಡಬೇಕಾಗುತ್ತದೆ' ಎಂದು ಸಚಿವಾಲಯದ ಅಧಿಕಾರಿಯೊಬ್ಬರು ಪ್ರಜಾವಾಣಿಗೆ ತಿಳಿಸಿದರು.

- ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು ಕನಿಷ್ಠ ಕಲಿಕಾ ಮಟ್ಟದ ಮಾನದಂಡ ನಿಗದಿಪಡಿಸಿದೆ. ಇದಕ್ಕಾಗಿ ಅಧ್ಯಯನ, ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ಹಿಂದಿ, ಇಂಗ್ಲೀಷ್ ಮತ್ತು ಉರ್ದು ವಿಷಯಗಳಲ್ಲಿ 1 ರಿಂದ 8 ರವರೆಗಿನ ಪ್ರತಿ ತರಗತಿಗೆ ಕಲಿಕಾ ಮಟ್ಟ ನಿಗದಿಪಡಿಸಲಾಗಿದೆ.

### ಕನಿಷ್ಠ ಕಲಿಕಾಮಟ್ಟ ಮಾನದಂಡ

- ಎಂಟನೇ ತರಗತಿವರೆಗಿನ ಶಿಕ್ಷಣ ಮುಗಿಸುವ ಹೊತ್ತಿಗೆ ವಿದ್ಯಾರ್ಥಿ/ನಿಗೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಬೇಕು ಮತ್ತು ಇವು ತನ್ನ ನಿತ್ಯ ಜೀವನದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಎಂಬುದನ್ನು ಗುರುತಿಸಬೇಕು.
- ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆ, ರಾಜ್ಯ ಮತ್ತು ಕೇಂದ್ರ ಮಟ್ಟಗಳಲ್ಲಿ ಅದರ ಕಾರ್ಯನಿರ್ವಹಣೆ ಬಗ್ಗೆ ಜ್ಞಾನ ಪಡೆದಿರಬೇಕು.
- ಲೋಕಸಭಾ ಚುನಾವಣಾ ಪ್ರಕ್ರಿಯೆ ಸೇರಿದಂತೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಪರಿಸರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಮಾಜದ ವಿವಿಧ ವರ್ಗಗಳ ಕೊಡುಗೆಗಳನ್ನು ಗುರುತಿಸಬೇಕು.
- ಎಂಟನೇ ತರಗತಿಯ ವಿದ್ಯಾರ್ಥಿಗಳು ಸಂವಿಧಾನದ ಮೌಲ್ಯಗಳನ್ನು ಗ್ರಹಿಸುವಂತೆ ಶಿಕ್ಷಕರು ಮಾಡಬೇಕು. ಅವರ ಕುಟುಂಬ ಹಾಗೂ ಸರ್ಕಾರ ನಿರ್ವಹಿಸುವ ಸಾಮಾಜಿಕ–ಆರ್ಥಿಕ ಪಾತ್ರದ ಬಗ್ಗೆಯೂ ಅವರಿಗೆ ತಿಳಿಹೇಳಬೇಕು.

ಕೃಪೆ: ಪ್ರಜಾವಾಣಿ, ದಿನಾಂಕ: 6.02.2017

# ಪರಿಷ್ಕೃತ ಪಠ್ಯಪುಸ್ತಕ "ಶಿಕ್ಷಣ ತಜ್ಞರ ಮತ್ತು ಶಿಕ್ಷಕರ ಮಧ್ಯೆ" ಚರ್ಚೆಯ ನಂತರ ಜಾರಿ ಮಾಡಲು ಒತ್ತಾಯ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ), ರಾಜ್ಯ ಸರ್ಕಾರವು ಉದ್ದೇಶಿಸಿರುವ ಪರಿಷ್ಕೃತ ಪಠ್ಯವನ್ನು ಜಾರಿ ಮಾಡುವ ಮೊದಲು, ನಾಡಿನ ಶಿಕ್ಷಣ ತಜ್ಞರ ಮತ್ತು ಶಿಕ್ಷಕರ ಅಭಿಪ್ರಾಯ ಪಡೆಯುವಂತೆ ಒತ್ತಾಯಿಸುತ್ತದೆ.

ಎನ್.ಸಿ.ಎಫ್. 2005 ಕೆ.ಸಿ.ಎಫ್. 2007 ರ ನಂತರ ಎನ್‌ಸಿಎಫ್ 2012 ಬರುವ ಹಂತದಲ್ಲಿದ್ದಾಗ ಪ್ರಸ್ತುತ ದೇಶದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ಪ್ರಕಟವಾಗಿದೆ. ಈ ಹಂತದಲ್ಲಿ 2005 ಎನ್.ಸಿ.ಎಫ್ ಆಧಾರಿತ ಪರಿಷ್ಕೃತ ಪಠ್ಯವನ್ನು 2017 ಜೂನ್‌ನಲ್ಲಿ ಜಾರಿ ಮಾಡಲು ಹೊರಟಿರುವುದು ಶಿಕ್ಷಕ ಸಮುದಾಯದಲ್ಲಿ ಮತ್ತು ಶಿಕ್ಷಣ ತಜ್ಞರಲ್ಲಿ ಆತಂಕ ಮತ್ತು ಗೊಂದಲವನ್ನು ಉಂಟುಮಾಡಿದೆ. ಅದಕ್ಕಾಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಈ ಕೆಳಗಿನ ಒತ್ತಾಯವನ್ನು ಮಾಡುತ್ತದೆ.

- ಪರಿಷ್ಕೃತ ಪಠ್ಯಪುಸ್ತಕ ಡಿ.ಎಸ್.ಇ.ಆರ್.ಟಿ.ಸಿ, ಸಿ.ಟಿ.ಇ. ಡಯಟ್ ಮತ್ತು ಶಿಕ್ಷಕರ ವಿಷಯ ವೇದಿಕೆಗಳಲ್ಲಿ ಚರ್ಚಿಸಿ ಅಭಿಪ್ರಾಯಗಳನ್ನು ಪಡೆದು ಅವುಗಳನ್ನು ಅನುಪಾಲಿಸಿ ಜಾರಿಗೊಳಿಸಬೇಕು.
- ಈ ಮಧ್ಯದಲ್ಲಿ ಮಾಧ್ಯಮಗಳಲ್ಲಿ ಸಿ.ಬಿ.ಎಸ್.ಸಿ ಪಠ್ಯವನ್ನು ನೇರವಾಗಿ ಕನ್ನಡಕ್ಕೆ ಅನುವಾದಿಸಿ ಜಾರಿಮಾಡಲಾಗುವುದು ಎನ್ನುವ ವಿಷಯ ಶಿಕ್ಷಕರಲ್ಲಿ ಮತ್ತೊಂದು ಗೊಂದಲವನ್ನು ಉಂಟುಮಾಡಿದೆ.

ಪುಟ 10 ಕ್ಕೆ ➢

➢ ಪುಟ 3 ರಿಂದ.....

**ಬರಗೂರರ ವೈಚಾರಿಕ ದೌರ್ಜನ್ಯ...**

ಇನ್ನಿಲ್ಲದಂತೆ ಕಾಡಿದ ಮಾಜಿ ರಾಜ್ಯಪಾಲ ಹಂಸರಾಜ್ ಭಾರಧ್ವಾಜ್ ಅವರೇ ಖುದ್ದು ಈ ಪಠ್ಯಕ್ರಮವನ್ನು ಜಾರಿ ಮಾಡಲು ಒಪ್ಪಿಗೆ ಸೂಚಿಸಿದ್ದರು ಮತ್ತು ಆ ಮೂಲಕ ಕೇಸರಿಕರಣವೆನ್ನುವ ಬುದ್ಧಿಜೀವಿಗಳ ಹಳದಿ ಕನ್ನಡಕವನ್ನು ಕಿತ್ತೆಸೆದಿದ್ದರು. ಬರಗೂರರಂತ ಆಸ್ಥಾನ ಸಾಹಿತಿಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವ ಸಿಎಂ ಸಾಹೇಬರಿಗಾದರೂ ಭಾರಧ್ವಾಜ್ ಅವರು ಒಪ್ಪಿಗೆ ಸೂಚಿಸಿರುವುದು ಮರೆತುಹೋಗಿದೆಯೇ?

ಕಳೆದ ತಿಂಗಳು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ 'ನೀಟ್' ಕನ್ನಡದಲ್ಲಿ ಇಲ್ಲದಿರುವುದು ವಿವಾದಕ್ಕೆ ಕಾರಣ ವಾಗಿತ್ತು. ಈ ಸುದ್ದಿ ಪ್ರಕಟವಾದೊಡನೆ ಕನ್ನಡ ಹೋರಾಟಗಾರರು, ರಾಜ್ಯಸರಕಾರ ಮೊದಲು ಬೊಟ್ಟು ಮಾಡಿದ್ದು ಕೇಂದ್ರ ಸರಕಾರದತ್ತ. ನಂತರ ಇದು ರಾಜ್ಯ ಸರಕಾರದ ಬೇಜವಾಬ್ದಾರಿ ತನದಿಂದಾಗಿರುವ ಎಡವಟ್ಟು ಎಂಬುದು ಜಗಜ್ಜಾಹೀರಾಯಿತು. ತಪ್ಪಿನಿಂದ ಬುದ್ಧಿ ಕಲಿಯದೇ, ತಮ್ಮ ಎಂದಿನ ಹಟಮಾರಿ ಧೋರಣೆಯನ್ನು ಮುಂದುವರೆಸುವುದು ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಜನ್ಮ ಸಿದ್ಧ ಹಕ್ಕಲ್ಲವೇ? ಹಾಗಾಗಿ ರಾಜ್ಯಸರಕಾರ ಇನ್ನೊಂದು ಎಡವಟ್ಟು ಮಾಡಲು ತುದಿಗಾಲಿನಲ್ಲಿ ನಿಂತಿದೆ.

ಅಖಿಲ ಭಾರತ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡದ ಮಕ್ಕಳೇಕೆ ಹಿಂದುಳಿಯುತ್ತಾರೆ ಎಂಬ ಅಂಶವನ್ನಿಟ್ಟುಕೊಂಡು ಅಧ್ಯಯನ ನಡೆಸಿದ್ದ ಖ್ಯಾತ ವಿಜ್ಞಾನಿ ಡಾ. ಕಸ್ತೂರಿ ರಂಗನ್ ಅವರ ನೇತೃತ್ವದ ಕರ್ನಾಟಕ ಜ್ಞಾನ ಆಯೋಗ, 09,10,11,12ನೇ ತರಗತಿಯಲ್ಲಿ ಸಿಬಿಎಸ್‌ಇಯ ಪಠ್ಯಪುಸ್ತಕಗಳನ್ನೇ ಕನ್ನಡಕ್ಕೆ ಅನುವಾದಿಸಿಕೊಳ್ಳುವಂತೆ ರಾಜ್ಯ ಸರಕಾರಕ್ಕೆ ಶಿಫಾರಸ್ಸು ಮಾಡಿತ್ತು ಮತ್ತು ಈ ಶಿಫಾರಸ್ಸಿನಂತೆ ಶಿಕ್ಷಣ ಇಲಾಖೆಯ ದಕ್ಷ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ. ಬಹುಶಃ ಈ ಪುಸ್ತಕಗಳು ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಜಾರಿಗೆ ಬರುವ ಸಾಧ್ಯತೆಗಳಿದ್ದವು ಮತ್ತು ಆ ಮೂಲಕ ಕರ್ನಾಟಕ ವಿದ್ಯಾರ್ಥಿಗಳ ಭವಿಷ್ಯ ಬದಲಾಗುವ ಸಂಭವವಿತ್ತು. ಆದರೆ, ಈಗ ಬಡ ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಮತ್ತು ಸಿಎಂ ಸಿದ್ಧರಾಮಯ್ಯನವರ ಜೋಡಿ ಭಂಡಾಟವಾಡಲು ಹೊರಟುನಿಂತಿದೆ.

ಕನ್ನಡದಲ್ಲಿ ನೀಟ್ ಪರೀಕ್ಷೆ ನಡೆಯುವುದಿಲ್ಲ ಎಂಬ ವಿಷಯವನ್ನಿಟ್ಟುಕೊಂಡೇ ದೊಡ್ಡ ಮಟ್ಟದಲ್ಲಿ ದನಿಯೆತ್ತಿದ ಹೋರಾಟಗಾರರಿಗೆ, NCF 2017 ಕಾಲದ ಈ ಹೊಸ ಪಠ್ಯಪುಸ್ತಕಗಳಿಂದ ಕನ್ನಡದ ಮಕ್ಕಳು NCF 2017 ನಿಂದ ಮತ್ತು ಅಖಿಲ ಭಾರತದ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಿಂದುಳಿಯುತ್ತಾರೆ ಎಂಬುದು ಅರಿವಾಗುತ್ತಿಲ್ಲವೇ?

ಹೋಗಲಿ ಇಷ್ಟೆಲ್ಲಾ ಅವಾಂತರಗಳನ್ನು ಮಾಡಿಕೊಂಡರೂ, ಕನಿಷ್ಠ ನಿಯಮಗಳನ್ನು ಬರಗೂರರ ಸಮಿತಿ ಪಾಲಿಸುತ್ತಿದೆಯಾ ಎಂದು ನೋಡಿದರೆ ಅದೂ ಇಲ್ಲ.

ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ಡಿಎಸ್‌ಇಆರ್‌ಟಿ ಅನುಮತಿಯಿಲ್ಲದೇ ಪಠ್ಯಮುದ್ರಿಸುವ ಹಾಗಿಲ್ಲ. ಆದರೆ ಡಿಎಸ್‌ಇಆರ್‌ಟಿಯ ಅನುಮತಿಯನ್ನೇ ಪಡೆದಿಲ್ಲ. ರಾಜ್ಯದ ಶೈಕ್ಷಣಿಕ ಅಂಶಗಳ ನಿರ್ಧಾರ ಮಾಡುವ ಸರ್ವೋಚ್ಚ ಅಧಿಕಾರವುಳ್ಳ ಶಿಕ್ಷಣ ಸಚಿವರ ಅಧ್ಯಕ್ಷತೆಯ ರಾಜ್ಯ ಶೈಕ್ಷಣಿಕ ಆಡಳಿತ ಮಂಡಳಿ ಗಮನಕ್ಕೂ ಬಾರದೆಯೇ ಪುಸ್ತಕ ಮುದ್ರಣಕ್ಕೆ ಹೋಗುತ್ತಿದೆ.

ಈ ಹಿಂದಿನ ಎಲ್ಲಾ ಸಮಿತಿಗಳು ತಮಗೂ ಹಿಂದಿನ ಸಮಿತಿಗಳ ಸದಸ್ಯರಿಗೆ ನೋಟಿಸ್ ನೀಡಿ ವಿವರಣೆ ಪಡೆದು ಪರಿಷ್ಕರಣೆ ಮಾಡುತ್ತಿದ್ದರು. ಆದರೆ ಬರಗೂರರ ತುಘಲಕ್ ಸಮಿತಿ ಅಂತ ಕೆಲಸವನ್ನೂ ಮಾಡಿಲ್ಲ. ಪಠ್ಯದಲ್ಲಿ ಯಾವ ಬದಲಾವಣೆ ಮಾಡುತ್ತಿದ್ದೇವೆ, ಕಾರಣವೇನು ಎಂಬ ವಿಚಾರ ಸಾರ್ವಜನಿಕಗೊಳಿಸಿಲ್ಲ. ಮುಚ್ಚಿಡುವಂತದ್ದು ಅದೇನಿದೆಯೋ ಬರಗೂರರೇ ಹೇಳಬೇಕು. ಹೋಗಲಿ ಶಿಕ್ಷಕರ ವೇದಿಕೆಗಳಿಗಾದರೂ ಮಾಹಿತಿ ನೀಡಿ ಚರ್ಚೆ ನಡೆಸಲಾಗಿದೆಯೇ ಎಂದರೆ ಅದೂ ಇಲ್ಲ. ಹೊಸ ಪಠ್ಯಪುಸ್ತಕಗಳ ಬಗ್ಗೆ ಶಿಕ್ಷಕರಿಗೆ ತರಬೇತಿಯನ್ನೂ ನೀಡಲಾಗಿಲ್ಲ! ಇನ್ನೇನು ಫಲಿತಾಂಶ, ಶಾಲಾ ದಾಖಲಾತಿಗಳಲ್ಲಿ ಶಿಕ್ಷಕರು ಹೆಚ್ಚು ಕೆಲಸ ಮಾಡಬೇಕಾದ ಸಂದರ್ಭದಲ್ಲಿ, ಹೊಸ ಪಠ್ಯ ಪುಸ್ತಕಗಳ ತರಬೇತಿಗೆ ತರಾತುರಿಯಲ್ಲಿ ಸಮಯ ಸಿಗುತ್ತದೆಯೇ? ಸರಕಾರದ ಒತ್ತಡಕ್ಕೆ ಶಿಕ್ಷಕರೂ ತರಬೇತಿಗೆ ಬಂದರೂ ಎಷ್ಟರಮಟ್ಟಿಗೆ ಅವರು ಅದರಲ್ಲಿ ತೊಡಗಿಕೊಳ್ಳಲು ಸಾಧ್ಯ ಹೇಳಿ? ಶಿಕ್ಷಕರ ಕಷ್ಟಗಳ ಬಗ್ಗೆಯಾದರೂ ಸಮಿತಿ ಯೋಚಿಸ ಬಾರದೇ? ಕೋಟ್ಯಂತರ ಮಕ್ಕಳ ಭವಿಷ್ಯದ ಜೊತೆ ಬರಗೂರರ ಸಮಿತಿಯ ನಡೆಯನ್ನು ವೈಚಾರಿಕ ದೌರ್ಜನ್ಯ ಎನ್ನದೇ ಬೇರೆ ವಿಧಿಯಿಲ್ಲ.

ಈಗಾಗಲೇ ಪ್ರಮುಖ ಪತ್ರಿಕೆಗಳು ಈ ಬಗ್ಗೆ ದನಿಯೆತ್ತಿವೆ. ಶಿಕ್ಷಣ ಪರಿಣಿತರು, ಸಾರ್ವಜನಿಕರು ಈ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ #SaveKarnatakaEducation #ಶಿಕ್ಷಣದ ಕೇಸರೀಕರಣ ಎಂಬ ಹ್ಯಾಷ್‌ಟ್ಯಾಗುಗಳ ಮೂಲಕ ಪ್ರತಿಭಟಿಸಲಾಗುತ್ತಿದೆ. ಸಿದ್ದರಾಮಯ್ಯನವರ ಸರಕಾರದ ಈ ನಡೆಯನ್ನು ತಡೆಯುವಂತೆ ಶುರು ಮಾಡಲಾಗಿರುವ ಆನ್‌ಲೈನ್ ಪಿಟಿಷನ್ನಿಗೆ ಸಾವಿರಕ್ಕೂ ಹೆಚ್ಚು ಜನ ಬೆಂಬಲ ಸೂಚಿಸಿ ಸಹಿ ಮಾಡಿದ್ದಾರೆ.

ಇಷ್ಟೆಲ್ಲಾ ನಡೆಯುತ್ತಿದ್ದರೂ ಸಿಎಂ– ಬರಗೂರು ಜೋಡಿ ಯದ್ದು ಡೋಂಟ್ ಕೇರ್ ನೀತಿಯಾಗಿದೆ. ಕೇವಲ ತಮ್ಮ ಐಡಿಯಾಲಜಿಯ ಅಹಂ ತಣಿಸಿಕೊಳ್ಳಲಿಕ್ಕಾಗಿ ಬಡ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕೊಳ್ಳಿಯಿಡಲು ಹೊರಟಿರುವ ಬರಗೂರು ರಾಮಚಂದ್ರಪ್ಪನವರ ಹಟಮಾರಿ ಧೋರಣೆಯ ವಿರುದ್ಧ ರಾಜ್ಯದ ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪ್ರಜ್ಞಾವಂತ ನಾಗರೀಕರು ತುರ್ತಾಗಿ ದನಿಯೆತ್ತಬೇಕಾಗಿದೆ ಮತ್ತು ಸಿದ್ದರಾಮಯ್ಯನವರ ಸರಕಾರದ ಶಿಕ್ಷಣದ ಕೇಸರೀಕರಣವನ್ನು ತಡೆಯಬೇಕಾಗಿದೆ.

**ಕೃಪೆ: ಅಸೀಮಾ, ಲೇಖಕರು: ರಾಕೇಶ್ ಶೆಟ್ಟಿ**

➢ ಪುಟ 6 ರಿಂದ..... ಆರ್.ಎಂ. ಎಸ್. ಎ. ಒಂದು ಅವಲೋಕನ

ಉದ್ಯೋಗದ ಮೂಲಕ ಮಾಡಬೇಕು. ರಾಜ್ಯಗಳು / ಕೇಂದ್ರ ಆಡಳಿತ ಪ್ರದೇಶಗಳು ವೃತ್ತಿ ತರಬೇತಿ ಕೇಂದ್ರಗಳನ್ನು, ಸಂಸ್ಥೆಗಳನ್ನು ವಲಯ, ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಬೇಕು

## ಕೇಂದ್ರೀಯ ವಿದ್ಯಾಲಯ ಮತ್ತು ಜವಾಹರ್ ನವೋದಯ ವಿದ್ಯಾಲಯಗಳು

ಕೇಂದ್ರೀಯ ವಿದ್ಯಾಲಯಗಳ ಮತ್ತು ಜವಾಹರ್ ನವೋದಯ ವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸುವುದಲ್ಲದೆ ಮಾರ್ಗದರ್ಶಿ ಶಾಲೆಗಳಾಗಿರುವುದರಿಂದ ಅವುಗಳ ಪಾತ್ರವನ್ನು ಬಲಪಡಿಸಬೇಕು.

## ಹಣಕಾಸು ಪೂರೈಕೆಯ ವಿಧಾನ ಮತ್ತು ಬ್ಯಾಂಕ್ ಖಾತೆ ಪ್ರಾರಂಭ

ಕೇಂದ್ರ ಸರ್ಕಾರವು ಶೇಕಡಾ 75 ವೆಚ್ಚವನ್ನು ಎಲ್ಲ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಎಲ್ಲ ರಾಜ್ಯಗಳಿಗೆ / ಕೇಂದ್ರ ಆಡಳಿತ ಪ್ರದೇಶಗಳಿಗೆ 11ನೇ ಯೋಜನೆಯ ಅವಧಿಯಲ್ಲಿ ಈಶಾನ್ಯ ರಾಜ್ಯಗಳನ್ನು ಹೊರತು ಪಡಿಸಿ ನೀಡುವುದು. ಈಶಾನ್ಯ ರಾಜ್ಯಗಳಿಗೆ ಶೇಕಡಾ 90 ಭಾಗವನ್ನು ಕೇಂದ್ರವೇ ನೀಡುವುದು.

ಎಲ್ಲ ರಾಜ್ಯಗಳು / ಕೇಂದ್ರ ಆಡಳಿತ ಪ್ರದೇಶ ಎಲ್ಲವುಗಳ ಅನುಷ್ಠಾನ ವೆಚ್ಚದ 25% ಅನ್ನು ಮೊದಲು (ಹಣ ಕಾಸನ್ನು ಕೇಂದ್ರ ಮತ್ತು ರಾಜ್ಯಗಳು ಹಂಚಿಕೊಳ್ಳಬೇಕಾದಲ್ಲಿ) 11ನೇ ಯೋಜನಾ ಅವಧಿಯಲ್ಲಿ ಭರಿಸಬೇಕು. ಈಶಾನ್ಯ ರಾಜ್ಯಗಳು 10% ವೆಚ್ಚವನ್ನು ಮಾತ್ರ ಕೊಡಬೇಕಾಗುವುದು. ರಾಜ್ಯ ಸರ್ಕಾರವು ವ್ಯಾಪಕ ಆರ್ಥಿಕ ನಿರ್ವಹಣಾ ವ್ಯವಸ್ಥೆಯನ್ನು ನಿರ್ಮಿಸಿ ಹಣಕಾಸಿನ ವರ್ಗಾವಣೆ ಮತ್ತು ಬಳಕೆಗಳನ್ನು ಈಗಿರುವ ಸರ್ವ ಶಿಕ್ಷಣ ಅಭಿಯಾನ (ಎಸ್ ಎಸ್ ಎ) ಸೊಸೈಟಿಗಳ ಮೂಲಕ ಮಾಡುವುದು. ಇದರಿಂದ ಪಾರದರ್ಶಕತೆ, ಕಾರ್ಯಕ್ಷಮತೆ, ಉತ್ತರದಾಯಿತ್ವ ಮತ್ತು ಅಂತಿಮ ಫಲಿತದವರೆಗಿನ ನಿಧಿಯ ಬಳಕೆಯಲ್ಲಿ ಹಾದು ಹೋದ ಹಾದಿಯನ್ನು ಗುರುತಿಸಬಹುದು.

ರಾಜ್ಯ, ಜಿಲ್ಲೆ, ಶಾಲಾ ಮಟ್ಟದಲ್ಲಿ ನಿಧಿಗಾಗಿ ಪ್ರತ್ಯೇಕ ಖಾತೆಯನ್ನು ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ತೆರೆಯ ಬೇಕು. ಮುಖ್ಯೋಪಾಧ್ಯಾಯರು ಅಥವ ಪ್ರಾಂಶುಪಾಲರು, ಶಾಲಾ ಶಿಕ್ಷಣ ಸಮಿತಿಯ ಉಪ ಪ್ರಾಂಶುಪಾಲರು ಶಾಲಾ ಮಟ್ಟದಲ್ಲಿ ಜಂಟಿ ಖಾತೆ ಹೊಂದಿರುವರು. ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಜಿಲ್ಲಾ ಮಟ್ಟದಲ್ಲಿ ಜಂಟಿ ಖಾತೆಯನ್ನು ಹೊಂದಿರುವರು.

12ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯದ ಹಂಚಿಕೆ ಪ್ರಮಾಣವು 50:50. ಪ್ರಮಾಣಕ್ಕೆ ಬದಲಾಗುವುದು. ಈಶಾನ್ಯ ರಾಜ್ಯಗಳಿಗೆ ಹಂಚಿಕೆ ಪ್ರಮಾಣವು ಎರಡೂ, 11ನೇ ಮತ್ತು 12ನೇ ಪಂಚವಾರ್ಷಿಕ ಯೋಜನೆಗಳಿಗೆ 90:10 ಪ್ರಮಾಣದಲ್ಲಿರುವುದು.

ಶಿಕ್ಷಕರಾದ ನಾವು ಸರ್ಕಾರದ ಇಂತಹ ಯೋಜನೆಗಳನ್ನು ಎಲ್ಲ ಮಕ್ಕಳಿಗೂ ತಲುಪಿಸುವ ಸಂಕಲ್ಪ ಮಾಡಬೇಕಾಗಿದೆ. ●

➢ ಪುಟ 8 ರಿಂದ..... ಪರಿಷ್ಕೃತ ಪಠ್ಯಪುಸ್ತಕ

- ಈಗಿರುವ ಪಠ್ಯದಲ್ಲಿರುವ ಲೋಪದೋಷಗಳೇನು? ಎನ್ನುವ ಪಟ್ಟಿಯನ್ನು ಶಿಕ್ಷಕರ ಮಧ್ಯದಲ್ಲಿ ಚರ್ಚೆಗೆ ಬಿಡಬೇಕು.
- ಪರಿಷ್ಕೃತ ಪಠ್ಯಕ್ಕೆ ಶಿಕ್ಷಕರನ್ನು ಮಾನಸಿಕವಾಗಿ ಸಿದ್ದಮಾಡಲು ತರಬೇತಿ ಅವಶ್ಯಕ. ಆದರೆ ಇಲ್ಲಿಯವರೆಗೆ ಯಾವುದೇ ತರಹದ ಮಾಹಿತಿಯನ್ನು ಮತ್ತು ತರಬೇತಿಯನ್ನು ನೀಡದೆ ಪರಿಷ್ಕೃತ ಪಠ್ಯಪುಸ್ತಕ ಜಾರಿ ಮಾಡಲು ಹೊರಟಿರುವುದು ಆತುರದ ಕ್ರಮವಾಗಿದೆ.
- ಪಠ್ಯಪುಸ್ತಕ ಪರಿಶೀಲನಾ ಸಮಿತಿ ಸಲ್ಲಿಸಿರುವ ಕರುಡು ವರದಿಯನ್ನು ಮುದ್ರಿಸಲು ಸರ್ಕಾರ ಈಗಾಗಲೇ ಟೆಂಡರ್ ಕರೆದಿದೆ. ಅದರಲ್ಲಿನ ಅಂಶಗಳ ಕುರಿತು ಶಿಕ್ಷಣ ತಜ್ಞರು, ಶಿಕ್ಷಕರ ವಿಷಯ ವೇದಿಕೆಗಳು, ಶಿಕ್ಷಕರ ಸಮಾಲೋಚನಾ ಸಭೆಗಳಲ್ಲಿ ಮತ್ತು ಸಂಪನ್ಮೂಲ ವ್ಯಕ್ತಿಗಳ ಮಧ್ಯದಲ್ಲಿ ಚರ್ಚೆ ಮಾಡಬೇಕೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಸರಕಾರವನ್ನು ಒತ್ತಾಯಿಸಿ ಮೇಲಿನ ಮನವಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಲುಪಿಸಲು ಜಿಲ್ಲಾಧಿಕಾರಿಗಳಿಗೆ ಸಂಸದರಾದ ಪ್ರಲ್ಹಾದ ಜೋಶಿ, ಶಾಸಕರಾದ ಅರವಿಂದ ಬೆಲ್ಲದ, ಪ್ರಧಾನ ಕಾರ್ಯದರ್ಶಿ ಸಂದೀಪ ಬೂದಿಹಾಳ, ಜಿಲ್ಲಾಧ್ಯಕ್ಷ ಶ್ರೀಧರ ಪಾಟೀಲ ಕುಲಕರ್ಣಿ ಮನವಿ ಸಲ್ಲಿಸಿದರು. ಶಿಕ್ಷಕರಾದ ಶಿವಾನಂದ ನಾಗೂರ, ಬಸವರಾಜ ದಳವಾಯಿ, ಬಸವರಾಜ ದೇವರಮನಿ, ಚಂದ್ರು ಪಾಟೀಲ, ಹರೀಶ ಜೋಶಿ ಉಪಸ್ಥಿತರಿದ್ದರು.

**ಸಂದೀಪ ಬೂದಿಹಾಳ,** ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

ಹಿಂದಿನ ಸಂಚಿಕೆಯ ಆದರ್ಶ ಶಿಕ್ಷಕರು ಮಾಲಿಕೆಯ ಟಿ. ಎಸ್. ವೆಂಕಣ್ಣಯ್ಯನವರ ಲೇಖನವನ್ನು ಹಾಗೂ ದಾರಿದೀಪ ಮಾಲಿಕೆಯ ಲೇಖನವನ್ನು ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ...

**ನಿಯೋಜಿಸಲ್ಪಟ್ಟ ಕೆಲಸದಲ್ಲಿ ಇಂದು ಉತ್ತಮಿಕೆಯನ್ನು ಮೆರೆಯುವುದೇ ನಾಳಿನ ಪಾಲಿಗೆ ಉತ್ತಮ ಸಿದ್ಧತೆ ಎನಿಸಿಕೊಳ್ಳುತ್ತದೆ.**

# ಸಂಘದ ವಾರ್ತೆ

# ವಿವೇಕಾನಂದರ ಆದರ್ಶಗಳ ಅಳವಡಿಕೆಗೆ ಕರೆ

**ಬೆಂಗಳೂರು :** ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಉತ್ತರ ಜಿಲ್ಲಾ ಘಟಕದಿಂದ ದಿನಾಂಕ 21.1.2017 ರಂದು ಶ್ರೀ ಮಾತಾ ಆಂಗ್ಲಶಾಲೆ ಆರ್.ಟಿ.ನಗರದಲ್ಲಿ ಸಂಕಲ್ಪ ದಿನ ನಡೆಯಿತು. ಮುಖ್ಯ ಅತಿಥಿ ಕೃ. ನರಹರಿಯವರು ಶಿಕ್ಷಕರು ಆದರ್ಶವಾಗಿರಬೇಕು. ಸನ್ನಡತೆಯಿಂದ ಮಕ್ಕಳಿಗೆ ಮಾದರಿಯಾಗಿದ್ದು ರಾಷ್ಟ್ರಭಕ್ತಿ ಮತ್ತು ಸಂಸ್ಕೃತಿಯನ್ನು ಬೆಳೆಸಬೇಕು ಮತ್ತು ಸ್ವಾಮಿವಿವೇಕಾನಂದರ ವ್ಯಕ್ತಿತ್ವ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕೆಂದು ಕರೆನೀಡಿದರು.

ಸಂಘದ ಕಛೇರಿಯ ಪ್ರಮುಖರಾದ ಜಿ.ಎಸ್ ಕೃಷ್ಣಮೂರ್ತಿಯವರು ಸಂಕಲ್ಪ ಬೋಧನೆಯನ್ನು ಮಾಡಿದರು. ರಾಜ್ಯದ ಖಜಾಂಚಿಗಳಾದ ಜೆ.ಎಂ ಜೋಷಿಯವರು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಗಂಗಪ್ಪನವರು ಸ್ವಾಗತಿಸಿದರು. ಸಂಸ್ಥೆಯ ಸಂಸ್ಥಾಪಕರಾದ ಶ್ರೀ ವೆಂಕಟೇಶ್‌ರವರು ಕೃ.ನರಹರಿಯವರಿಗೆ ಗೌರವಾರ್ಪಣೆ ಸಲ್ಲಿಸಿ ಸಂಘದ ಕಾರ್ಯಕ್ರಮಗಳಿಗೆ ತಮ್ಮ ಬೆಂಬಲ ನೀಡುವುದಾಗಿ ಭರವಸೆ ನೀಡಿದರು.

ಜಿಲ್ಲಾ ಖಜಾಂಚಿಗಳಾದ ಹರಿದಾಸ್‌ರವರು ಪ್ರಾರ್ಥಿಸಿದರು. ಉತ್ತರವಲಯ 3. ರ ಆಧ್ಯಕ್ಷರಾದ ಸಿ.ವಿ ಶಿವಕುಮಾರ್ ವಂದನಾರ್ಪಣೆ ಸಲ್ಲಿಸಿದರು.



ವರದಿ : ಗಂಗಪ್ಪ, ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ



**ಬಳ್ಳಾರಿ :** ಸ್ವಾಮಿ ವಿವೇಕಾನಂದರು ಆತ್ಮವಿಶ್ವಾಸದ ಪ್ರತೀಕ. ಅವರ ಭಾವಚಿತ್ರವನ್ನು ತದೇಕ ಚಿತ್ತದಿಂದ ನೋಡಿದಾಗ ನಿರಾಶ ಭಾವನೆ ತೊಲಗುತ್ತದೆ. ಮಹಾನ್ ಚೇತನ ಶಕ್ತಿ ಸ್ವರೂಪ ಅವರು. ಅಮೇರಿಕಾದ ಚಿಕಾಗೋ ಪ್ರಾಂತ್ಯದಲ್ಲಿ ಮಾಡಿದ ಭಾಷಣದಲ್ಲಿ ಇಡೀ ಪ್ರಪಂಚಕ್ಕೆ ಹಿಂದೂ ಧರ್ಮದ ಘನತೆಯನ್ನು ಪರಿಚಯಿಸಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ. ಅವರೊಬ್ಬ ವೀರ ಸನ್ಯಾಸಿ, ಬಾಲ್ಯದಿಂದಲೂ ಕಠಿಣ ವ್ರತಗಳನ್ನು ಆಚರಿಸುತ್ತಾ ತ್ಯಾಗಮಯಿ ಜೀವನ ಅನುಭವಿಸಿದವರು. ಏಳಿ! ಎದ್ದೇಳಿ! ಗುರಿಮುಟ್ಟುವವರೆಗೂ ವಿಶ್ರಮಿಸದಿರಿ ಎಂಬ ಸಂದೇಶವನ್ನು ಯುವ ಪೀಳಿಗೆಗೆ ನೀಡುತ್ತಾ ಈ ದೇಶದ ಸಂಸ್ಕೃತಿಯ ರಕ್ಷಣೆಗೆ ಕಂಕಣಬದ್ಧರಾಗುವಂತೆ ಎಚ್ಚರಿಸಿದರು ಎಂದು ಪ್ರಗತಿ ಕೃಷ್ಣ ಬ್ಯಾಂಕ್ ಸಹಾಯಕ ವ್ಯವಸ್ಥಾಪಕರಾದ ಡಬ್ಲ್ಯೂ. ನಾಗರಾಜ್ ನುಡಿದರು. ಅವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ತಾಲ್ಲೂಕು ಘಟಕದ ವತಿಯಿಂದ ಏರ್ಪಡಿಸಿದ ಸ್ವಾಮಿ ವಿವೇಕಾನಂದರ ಜಯಂತಿ ಪ್ರಯುಕ್ತ ಉಪನ್ಯಾಸ ನೀಡಿದರು.

ಬಳ್ಳಾರಿ ಪೂರ್ವ ವಲಯದಿಂದ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ರುದ್ರಮುನಿ ಸ್ವಾಮಿಯವರು ಮಾತನಾಡಿ, ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾದ ದಂಪತಿಗಳಿಬ್ಬರು ದೀನದಲಿತರ ಸೇವೆಯಲ್ಲಿ ತೊಡಗಿದ ಅಪರೂಪದ ಕಥೆಯೊಂದನ್ನು ತಿಳಿಸಿದರಲ್ಲದೇ ಮಕ್ಕಳು ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಓದುವಂತೆ ಕರೆನೀಡಿದರು. ಪ್ರೌಢಶಾಲೆಯ ಪ್ರಭಾರಿ ಮುಖ್ಯ ಗುರುಗಳಾದ ನಾಗರಾಜ ಮಾತನಾಡಿ ರಾಮಕೃಷ್ಣ ಪರಮಹಂಸರ ಗರಡಿಯಲ್ಲಿ ಪಳಗಿದ ಅನೇಕ ಶಿಷ್ಯವೃಂದದವರು ಸಂಸಾರ ತ್ಯಜಿಸಿ ಸನ್ಯಾಸಿಗಳಾದರು. ನರೇಂದ್ರ ವಿವೇಕಾನಂದರಾದರು. ಪಾಂಡಿತ್ಯವನ್ನು ಗಳಿಸಿಕೊಂಡಿದ್ದ ವಿವೇಕಾನಂದರ ಜೀವನ ಸಾಧನೆ ಅನುಕರಣೀಯ ಎಂದರು. ಜಿಲ್ಲಾಧ್ಯಕ್ಷರಾದ ಎ. ಗುಂಡಾಚಾರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ನಿರೂಪಣೆ ತಾಲ್ಲೂಕು ಅಧ್ಯಕ್ಷರಾದ ಯು. ರಮೇಶ್ ನಿರ್ವಹಿಸಿದರು. ಸೋಮಶೇಖರ್ ವಂದಿಸಿದರು.

ಸ್ವಾಮಿ ವಿವೇಕಾನಂದರ ಜಯಂತಿ ಪ್ರಯುಕ್ತ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಭಾಷಣ, ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜೇತರಿಗೆ ಇದೇ ಸಂದರ್ಭದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು.

ವರದಿ : ಯು.ರಮೇಶ್, ಜಿಲ್ಲಾಧ್ಯಕ್ಷರು, ಬಳ್ಳಾರಿ




ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ವತಿಯಿಂದ ಸಂಕಲ್ಪ ದಿನಾಚರಣೆ



ಕಲಬುರಗಿ ಜಿಲ್ಲೆಯ ಅಫಜಲಪುರ ಘಟಕದಿಂದ ಸಂಕಲ್ಪ ದಿವಸ ಆಚರಿಸಲಾಯಿತು. ತಾಲ್ಲೂಕು ಪ್ರಮುಖ ಸುದ್ದಿಗಾರರಾದ ಚಿಂಚೋಳಿ ಉಪಸ್ಥಿತರಿದ್ದರು.

## ಗಮನಿಸಿ

ಶಿಕ್ಷಕ ಸಮಾಚಾರಕ್ಕೆ ವರದಿ ಕಳುಹಿಸುವವರು ಚಿತ್ರ ಸಮೇತ, ವರದಿಯನ್ನು ಕನ್ನಡದಲ್ಲಿ ಟೈಪ್ ('ನುಡಿ ಅಥವಾ ಬರಹ' ಬಳಕೆ) ಮಾಡಿ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ಕಳುಹಿಸಬಹುದು.

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-02-2017 Date of Posting 20th or 21st of every month

# ಚಿತ್ರ ಸುದ್ದಿಗಳು



ಪರಿಷ್ಕೃತ ಪಠ್ಯಪುಸ್ತಕವನ್ನು ಜಾರಿಗೆ ತರುವ ಮೊದಲು ಶಿಕ್ಷಣ ತಜ್ಞರು ಮತ್ತು ಶಿಕ್ಷಕರ ಮಧ್ಯೆ ಚರ್ಚೆ ಮಾಡಿ ಜಾರಿಗೆ ತರುವಂತೆ ಒತ್ತಾಯಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ತನ್ವೀರ ಸೇಠ್‌ರವರಿಗೆ ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಧಾರವಾಡ ಜಿಲ್ಲಾ ಘಟಕದ ವತಿಯಿಂದ ಮನವಿ ಸಲ್ಲಿಸಲಾಯಿತು. ರಾಜ್ಯ ಸಹ–ಪ್ರಧಾನ ಕಾರ್ಯದರ್ಶಿ ಶ್ರೀ ಸಂದೀಪ ಬೂದಿಹಾಳ, ಶ್ರೀಧರ ಪಾಟೀಲ ಕುಲಕರ್ಣಿ, ಶ್ರೀ ಶಿವಾನಂದ ನಾಗೂರ, ಶ್ರೀ ಪರಮೇಶ್ವರಪ್ಪ ಓಲೇಕಾರ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಶಹಾಪುರದ ಶ್ರೀ ಚಿಂತಮ್ಮಗೌಡತಿ ಸ್ಮಾರಕ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ, ಉಪನ್ಯಾಸ ಕಲಬುರಗಿಯ ರಾಮಕೃಷ್ಣ ಮಠದ ಸ್ವಾಮಿ ಮಹೇಶ್ವರಾನಂದಜಿ ಮಹಾರಾಜ ಶ್ರೀ ಮಹೇಶ ಬಸರಕೋಡ ವಿಭಾಗ ಪ್ರಮುಖ, ಶ್ರೀ ಮಲ್ಲಿಕಾರ್ಜುನ ಅವಂಟಿ ಪ್ರಾಚಾರ್ಯರು, ಶ್ರೀ ಅನಿಲ ಕುಮಾರ ಬಿರಾದಾರ ಜಿಲ್ಲಾ ಅಧ್ಯಕ್ಷರು, ಜಿಲ್ಲೆಯ ಎಲ್ಲಾ ಶಿಕ್ಷಕ ಬಂಧುಗಳು ಭಾಗವಹಿಸಿದ್ದರು.



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ ಕಲಬರ್ಗಿ ವತಿಯಿಂದ ಪರಿಷ್ಕೃತ ಪಠ್ಯ ಪುಸ್ತಕ ಶಿಕ್ಷಣ ತಜ್ಞರು ಮತ್ತು ಶಿಕ್ಷಕರ ಮಧ್ಯೆ ಚರ್ಚೆ ಮಾಡಿದೆ ಜಾರಿ ಮಾಡುತ್ತಿರುವುದನ್ನು ಖಂಡಿಸಿ ಮನವಿಯನ್ನು ಸಲ್ಲಿಸಲಾಯಿತು.

ಬೀದರ್ ನಗರದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ ಬೀದರ್ ಮತ್ತು ಪ.ಪೂ ಉಪನ್ಯಾಸಕರ ಸಂಘ ಬೀದರ್ ವತಿಯಿಂದ ಹೊಸ ವರ್ಷದ CALENDAR AND DAIRY ಬಿಡುಗಡೆ ಸಮಾರಂಭದಲ್ಲಿ MLC ಅಮರನಾಥ ಪಾಟೀಲ ಹಾಗೂ ರಾಮಕೃಷ್ಣ ಆಶ್ರಮದ ಶ್ರೀ ನಿರ್ಭಯಾನಂದ ಶ್ರೀಗಳು, ವಿಭಾಗ ಪ್ರಮುಖ ಮಹೇಶ ಬಸರಕೋಡ ಜಿಲ್ಲಾ ಅಧ್ಯಕ್ಷರಾದ ಶಾಂತಕುಮಾರ ಬಿರಾದಾರ, ಪ ಪೂ ಅಧ್ಯಕ್ಷರಾದ ಮಂಗಲಗಿ ಮತ್ತಿನ್ನಿತರರು ಉಪಸ್ಥಿತರಿದ್ದರು.









ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಪರಿಷ್ಕೃತ ಪಠ್ಯಪುಸ್ತಕವನ್ನು ಜಾರಿಗೆ ತರುವ ಮೊದಲು ಶಿಕ್ಷಣ ತಜ್ಞರು ಮತ್ತು ಶಿಕ್ಷಕರ ಮಧ್ಯೆ ಚರ್ಚೆ ಮಾಡಿ ಜಾರಿಗೆ ತರುವಂತೆ ಒತ್ತಾಯಿಸಿ ಮನವಿ ಪತ್ರ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮತ್ತು ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶೈಕ್ಷಣಿಕ ಮಹಾ ಸಂಘದ ವತಿಯಿಂದ 5.2.2016 ರಂದು ಕೇಂದ್ರದ ಬಜೆಟ್ ಕುರಿತು ಚರ್ಚಾಗೋಷ್ಠಿ.




IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 080-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com